ಸಂಪುಟ: 01 VOLUVE 01 | ಸಂಚಿಕೆ: 48 ISSUE: 48 | ಪುಟ: 06 PAGE: 06 | ಶನಿವಾರ 29-08-2026 SATURDAY 29-08-2026

VD

REG-PRGI NO KNKAN/26/A5239 ಮೋ: 9880010077
vkbharath25@gmail.com

# ವಿಜಯ ದುಂಬಿ

VIJAYA DUMBI KANNADA DAILY ವಿಶ್ವಾಸದ ಕನ್ನಡಿ ಕನ್ನಡ ದಿನಪತ್ರಿಕೆ Rs.3/-

2 ನೇಪಾಳ ದುರಂತ: ನಾಪತ್ತೆಯಾದ ಬೆಂಗಳೂರು ಗ್ರಾಮಾಂತರ ಮೂಲದ ನಿವಾಸಿಗಳ ಮಾಹಿತಿ ನೀಡಲು ಸರ್ಕಾರದ ಮನವಿ

4 ಈಗ ಚುನಾವಣೆ ನಡೆದರೆ 326 ಸ್ಥಾನಗಳೊಂದಿಗೆ ಎನ್‌ಡಿಎಗೆ ಅಧಿಕಾರ ಗ್ಯಾರಂಟಿ : ಸಮೀಕ್ಷೆ

6 ಆರ್‌ಡಿಪಿಆರ್ ನೇಮಕಾತಿ ಅಕ್ರಮ ಬಯಲು : ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಹೆಚ್ಚಿದ ಆಗ್ರಹ




## ಶ್ರೀ ರಾಮಾಂಜನೇಯ ರಂಗಕಲಾ ವೇದಿಕೆ (ರಿ)

ಎಸ್.ಹೆಚ್. ಬೀದಿ ಬೆತ್ತನಗೆರೆ ರಸ್ತೆ ನೆಲಮಂಗಲ

ಹಾಗೂ

ಶ್ರೀ ನೀಲಕಂಠೇಶ್ವರ ಕಲಾಟ್ರಸ್ಟ್ ಮೈಲನಹಳ್ಳಿ

ಸಂಘಗಳ ಉದ್ಘಾಟನಾ ಕಾರ್ಯಕ್ರಮ



## ಗೌರಿ ಗಣೇಶ ಹಬ್ಬದ ಪ್ರಯುಕ್ತ ನಾಟಕೋತ್ಸವ

ಸಹಕಾರ : ಬೆಂಗಳೂರು ಗ್ರಾಮಾಂತರ ಜಿಲ್ಲಾ ರಂಗಭೂಮಿ ಕಲಾವಿದರ ಸಂಘ (ರಿ.)

ದಿನಾಂಕ : 29-08-2026 ರಿಂದ 23-09-2026 ರ ವರೆಗೆ ಸಮಯ : ಬೆಳಗ್ಗೆ : 11.00 ರಿಂದ ಪ್ರಾರಂಭ

| | ದಿನಾಂಕ | ನಾಟಕದ ಹೆಸರು | ನಾಟಕದನಿರ್ದೇಶಕರು | ವ್ಯವಸ್ಥಾಪಕರು |
|---|---|---|---|---|
| 1. | 29/8/2026 | ದಕ್ಷಯಾಗ ಅಥವಾ ದಾಕ್ಷಾಯಣಿ ಅಗ್ನಿ ಪ್ರವೇಶ | ಮುನಿರಾಜು ಕಲ್ಲೊಡು | MR ಲೋಕೇಶ್ ಶ್ರೀನಿಲಕಂಠೇಶ್ವರ ಕಲಾ ಟ್ರಸ್ಟ್ ಮೈಲನಹಳ್ಳಿ |
| 2. | 30/8/2026 | ಶ್ರೀಕೃಷ್ಣ ಸಂಧಾನ (ಮಹಿಳೆಯರು) | ಮುನಿರಾಜು ಭಕ್ತನಪಾಳ್ಯ | ಅಂಜನಾದ್ರಿ ಕಲಾನಿಕೇತನ ಟ್ರಸ್ಟ್ ಚಿಕ್ಕಮಾರನಹಳ್ಳಿ |
| 3. | 31/8/2026 | ಸಂಪೂರ್ಣ ರಾಮಾಯಣ | ಎಮ್. ಗುರುಸ್ವಾಮಿ ವಸಂತ ನಗರ | ಶ್ರೀರಾಮಾಂಜನೇಯ ರಂಗ ಕಲಾ ವೇದಿಕೆ ನೆಲಮಂಗಲ |
| 4. | 1/9/2026 | ಕುರುಕ್ಷೇತ್ರ ಅಥವಾ ಶ್ರೀ ಕೃಷ್ಣ ಸಂಧಾನ | ಮುನಿರಾಜು ಭಕ್ತನಪಾಳ್ಯ | ಕುಶಾಲ್ ಅಡೆಪೇಟೆ, ನೆಲಮಂಗಲ ಟೌನ್ |
| 5. | 2/9/2026 | ಸಂಪೂರ್ಣ ರಾಮಾಯಣ | ಶಿವನಂಜಪ್ಪ ಗೌಡನಹಳ್ಳಿ | ಎಸ್.ಮಹಾದೇವಯ್ಯ, ಲೋಕೇಶ್ ಗೌಡ (ಟೈಲ್ಸ್ ) ಲಗ್ಗೆರೆ |
| 6. | 3/9/2026 | ಶ್ರೀಕೃಷ್ಣ ಸಂಧಾನ | ಧನಂಜಯ ಸುಂಕದಕಟ್ಟೆ | ಉಮೇಶ್ (ಬಂಡೆ) ಧನಂಜಯ ನಾಟಕ ನಿರ್ದೇಶಕರು |
| 7. | 4/9/2026 | ಧರ್ಮರಾಜ್ಯ ಸ್ಥಾಪನೆ | ನಾಗರಾಜು ಸಿ.ಎನ್ | ಸಂಪತ್ ಕುಮಾರ್ & ಪಂಚಾಕ್ಷರಿ ಟಿ ದಾಸರಹಳ್ಳಿ |
| 8. | 5/9/2026 | ಸಂಪೂರ್ಣ ರಾಮಾಯಣ | ಎಮ್. ಗುರುಸ್ವಾಮಿ ವಸಂತಪುರ | ಪಂಕಜಾಕ್ಷಿ ಕಲಾ ಟ್ರಸ್ಟ್ ವಸಂತಪುರ, ಬೆಂಗಳೂರು |
| 9. | 6/9/2026 | ಕುರುಕ್ಷೇತ್ರ (ಶಾಲ ಮಕ್ಕಳಿಂದ) | ಇಂದ್ರಕುಮಾರ್ ತೊರೆ ಹೊನ್ನಸಂದ್ರ | ಆರ್. ಲೋಕೇಶ್. ಭೀಮರಾಜು ಎಸ್.ಡಿ.ಎಮ್.ಸಿ, ಜಕ್ಕಸಂದ್ರ |
| 10. | 7/9/2026 | ಸಂಪೂರ್ಣ ರಾಮಾಯಣ | ಎಮ್ ಗುರುಸ್ವಾಮಿ ವಸಂತಪುರ | ಅಂಜನಾದ್ರಿ ಕಲಾನಿಕೇತನ ಟ್ರಸ್ಟ್ ಚಿಕ್ಕಮಾರನಹಳ್ಳಿ |
| 11. | 8/9/2026 | ಕುರುಕ್ಷೇತ್ರ | ವಸಂತ ಕುಮಾರ್ ದಾಬಸಪೇಟೆ ಚಿನಗ | ಸತೀಶ್ ವರದನಾಯಕನಹಳ್ಳಿ |
| 12. | 9/9/2026 | ಶ್ರೀಕೃಷ್ಣ ಸಂಧಾನ | ಮುನಿರಾಜು ಕಲ್ಲೊಡು | ಬೀರೆಗೌಡ ರಾಮದೇವನಹಳ್ಳಿ |
| 13. | 10/9/2026 | ಶ್ರೀಕೃಷ್ಣ ರಾಯಭಾರ | ಧನಂಜಯ ಸುಂಕದಕಟ್ಟೆ | ರಾಘವೇಂದ್ರ ಕಲಾ ಟ್ರಸ್ಟ್ ಸುಂಕದಕಟ್ಟೆ |
| 14. | 11/9/2026 | ಕುರುಕ್ಷೇತ್ರ | ರಾಮಸ್ವಾಮಿ ದಾಸರಹಳ್ಳಿ | ಗಿರಿರಾಜ್ & ಲಕ್ಷ್ಮೀನಾರಾಯಣ್, ಟಿ. ದಾಸರಹಳ್ಳಿ |
| 15. | 12/9/2026 | ಸಂಪೂರ್ಣ ರಾಮಾಯಣ | ಕೃಷ್ಣಮೂರ್ತಿ ನರಸಿಪುರ | ಎ.ಶ್ರೀಧರಗೌಡ ಉಪಾಧ್ಯಕ್ಷರು ಬೆಂಗಳೂರು ಗ್ರಾಮಾಂತರ ಜಿಲ್ಲಾ ರಂಗ ಭೂಮಿ ಕಲಾವಿದರ ಸಂಘ |
| 16. | 13/9/2026 | ದಕ್ಷ ಯಜ್ಞ | ಟಿ.ಎಲ್ ರಮೇಶ್ ತಿಪ್ಪನಾಯಕನಹಳ್ಳಿ | ಗೋಪಾಲಕೃಷ್ಣ ಘಂಟೆಹೊಸಹಳ್ಳಿ |
| 17. | 14/9/2026 | ಶ್ರೀಕೃಷ್ಣ ಸಂಧಾನ | ಮುನಿರಾಜು ಭಕ್ತನಪಾಳ್ಯ | ಮುನಿಯಪ್ಪ ಮಾಜಿ ತಾ.ಪಂ ಸದಸ್ಯರು |
| 18. | 15/9/2026 | ಕುರುಕ್ಷೇತ್ರ | ಜಗದೀಶ್ ಹೆಸರಘಟ್ಟ | ಹನುಮಂತರಾಯಪ್ಪ,ಗಂಗಾಧರನಪಾಳ್ಯ ಶ್ರೀನಿವಾಸ್, ಮಲ್ಲರಬಾಣವಾಡಿ |
| 19. | 16/9/2026 | ರಾಜ ಸತ್ಯವ್ರತ | ಮುನಿರಾಜು ಭಕ್ತನಪಾಳ್ಯ | ಲಕ್ಷ್ಮೀಪತಿ ಭಕ್ತನಪಾಳ್ಯ |
| 20. | 17/9/2026 | ಧರ್ಮರಾಜ್ಯ ಸ್ಥಾಪನೆ | ಎಮ್ ಗುರುಸ್ವಾಮಿ ವಸಂತಪುರ | ರಾಮಾಂಜನೆಯ ರಂಗ ಕಲಾ ವೇದಿಕೆ ನೆಲಮಂಗಲ |
| 21. | 18/9/2026 | ಸಂಪೂರ್ಣರಾಮಾಯಣ | ಮಾರಪ್ಪ ವರದೇನಹಳ್ಳಿ | ಬಿ.ಪ್ರಕಾಶ್ ಮೂರ್ತಿ ನಿಕಟ ಪೂರ್ವ ಅಧ್ಯಕ್ಷರು ಕ.ಸ.ಪ ನೆಲಮಂಗಲ |
| 22. | 19/9/2026 | ನಲ್ಲತಂಗಿ | ಮುನಿರಾಜು ಭಕ್ತನಪಾಳ್ಯ | ಸಾನಂದ್‌ಕುಮಾರ್, ಭೈರನಾಯಕನಹಳ್ಳಿ |
| 23. | 20/9/2026 | ಕುರುಕ್ಷೇತ್ರ | ಮುನಿರಾಜು ಭಕ್ತನಪಾಳ್ಯ | ವೆಂಕಟೇಶ್ ಬ್ಯಾಲಕೆರೆ, ಅನ್ನದಾನಯ್ಯ, ಬಾಳೇಮಂಡಿ, ಬಾಣವಾರ |
| 24. | 21/9/2026 | ಶ್ರೀ ಕೃಷ್ಣ ರಾಯಭಾರ | ರಾಮಕೃಷ್ಣರಾವ್ ಮಾದನಾಯಕನಹಳ್ಳಿ | ಅರುಣ್ ಕೆ.ಆರ್ ಮಾದನಾಯಕನಹಳ್ಳಿ |
| 25. | 22/9/2026 | ಶಾಂಭವಿ ಮಹಾತ್ಮೆ | ನಾಗೇಂದ್ರಪ್ಪ ಲಗ್ಗೆರೆ | ಭಾರತ್ ಗ್ರೂಪ್, ಸೆಕ್ಯುರಿಟಿ & ಲೇಬರ್ ಕಂಟ್ರಾಕ್ಟರ್, ಜನನಿ ಸೆಕ್ಯುರಿಟಿ ಸರ್ವೀಸ್ ಜಾಲಹಳ್ಳಿ ಕ್ರಾಸ್ |
| 26. | 23/9/2026 | ದಕ್ಷ ಯಜ್ಞ | ಟಿ.ಎಲ್. ರಮೇಶ್ ತಿಮ್ಮನಾಯಕನಹಳ್ಳಿ | ನಾಗರಾಜು ಶಿರಗನಹಳ್ಳಿ |



ಶ್ರೀ ವಿನಾಯಕ ಹೊಸ ಡ್ರಾಮ ಸೀನರಿ ಮೊಟಗಾನಹಳ್ಳಿ

ಮಾಲೀಕರು : ನಟರಾಜು& ನಾಗರಾಜುಚಾರ್

ಸ್ಥಳ : ಶ್ರೀನಿವಾಸ ಸಮುದಾಯ ಭವನ ಪಕ್ಕ, ಕೆ.ಇ.ಬಿ ಎದುರು, ನೆಲಮಂಗಲ

ಸರ್ವರಿಗೂ ಆದರದ ಸುಸ್ವಾಗತ

ಶ್ರೀಸಾಯಿ ಡಿಜಿಟಲ್ ಬಿಗ್ ಪ್ರಿಂಟ್ ಮೊ. : 9686187256



1) ಜಯಣ್ಣ 2)ಜೋತಿಲಿಂಗಪ್ಪ 3)ಲೋಕೇಶ್ ಎಮ್.ಆರ್ 4)ಕೃಷ್ಣಯ್ಯ ಎ 5)ಪ್ರಭಾಕರ್ ಹೆಚ್.ಬಿ 6)ಬಿ.ವೆಂಕಟೇಶ್ 7) ದೀನೇಶ್ ಹೆಚ್ 8) ಪ್ರದೀಪ್‌ಕುಮಾರ್

# ನೆಲಮಂಗಲಕ್ಕೆ ಶಾಶ್ವತ ಕುಡಿಯುವ ನೀರಿನ ಅನಿವಾರ್ಯತೆ: ಶಾಸಕ ಎನ್.ಶ್ರೀನಿವಾಸ್

## ಚನ್ನಪ್ಪ ಬಡಾವಣೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಅಂಗನವಾಡಿ ಕಟ್ಟಡ ಉದ್ಘಾಟನೆ

**ವಿಜಯ ದುಂಬಿ ಸುದ್ದಿ....**

**ನೆಲಮಂಗಲ: ನೆಲಮಂಗಲ ನಗರದಲ್ಲಿ ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚಾಗುತ್ತಿದ್ದು, ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿದೆ. ಪರಿಣಾಮವಾಗಿ 100ಕ್ಕೂ ಹೆಚ್ಚು ಕೊಳವೆಬಾವಿಗಳು ನಿಷ್ಕ್ರಿಯಗೊಂಡಿದ್ದು, ನಗರಕ್ಕೆ ಕಾವೇರಿ ಅಥವಾ ಎತ್ತಿನಹೊಳೆ ಯೋಜನೆಯಂತಹ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಅತ್ಯಂತ ಅನಿವಾರ್ಯವಾಗಿದೆ ಎಂದು ಶಾಸಕ ಎನ್.ಶ್ರೀನಿವಾಸ್ ಹೇಳಿದರು.**

ಇಲ್ಲಿನ ವಾರ್ಡ್ ಸಂಖ್ಯೆ 11ರ ಚನ್ನಪ್ಪ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಸುಸಜ್ಜಿತ ಅಂಗನವಾಡಿ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಗರದಲ್ಲಿ ಲಭ್ಯವಿರುವ ನೀರಿನ ಗುಣಮಟ್ಟವೂ ಗಣನೀಯವಾಗಿ ಕಡಿಮೆಯಾಗಿದೆ. ಈ ಸಮಸ್ಯೆಗೆ



ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ 6ನೇ ಹಂತದ ಯೋಜನೆಯಡಿ ಕಾವೇರಿ ನೀರನ್ನು ನೆಲಮಂಗಲಕ್ಕೆ ತರಲು ಈಗಾಗಲೇ ಅನುಮೋದನೆ ಕೊಡಿಸಲಾಗಿದೆ. ಆದರೆ ಇದಕ್ಕೂ ಮುನ್ನವೇ ಆದಷ್ಟು ಶೀಘ್ರವಾಗಿ ಕಾವೇರಿ ನೀರು ನೆಲಮಂಗಲ ಪ್ರವೇಶಿಸುವಂತೆ ನಿರಂತರ ಪರಿಶ್ರಮ ವಹಿಸಲಾಗುವುದು. ಸಾರ್ವಜನಿಕರು ನೀರಿನ ತೀವ್ರ ಅಭಾವವಿರುವುದರಿಂದ ನೀರನ್ನು ಮಿತವಾಗಿ



ಬಳಸಬೇಕು ಎಂದು ಮನವಿ ಮಾಡಿದರು.

ನಗರಸಭೆ ಅಧ್ಯಕ್ಷ ಎನ್.ಗಣೇಶ್ ಮಾತನಾಡಿ, "ನಗರದ ಕೊಳವೆ ಬಾವಿಗಳಲ್ಲಿ ನೀರು ಬಟಾಬಯಲಾಗಿ ನಿಷ್ಕ್ರಿಯಗೊಳ್ಳುತ್ತಿರುವುದರಿಂದ ಕುಡಿಯುವ ನೀರಿನ ಅಭಾವ ತೀವ್ರಗೊಂಡಿದೆ. ಪ್ರಸ್ತುತ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಲಭ್ಯವಿರುವ ಹೆಚ್ಚಿನ ನೀರು ನೇರ ಬಳಕೆಗೆ ಯೋಗ್ಯವಿಲ್ಲದ ಕಾರಣ ಶಾಸಕರ ಮಾರ್ಗದರ್ಶನದಲ್ಲಿ ಹಾಗೂ ಖಾಸಗಿ ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CSR) ಸಹಕಾರದೊಂದಿಗೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಇದಲ್ಲದೆ, ಮಕ್ಕಳಿಗೆ ಅನುಕೂಲವಾಗುವಂತೆ ಆಟದ ಮೈದಾನ ಒಳಗೊಂಡ ಸುಸಜ್ಜಿತ ಅಂಗನವಾಡಿ ಕಟ್ಟಡವನ್ನು ಸಿದ್ಧಪಡಿಸಲಾಗಿದೆ," ಎಂದರು.

**ಗಣ್ಯರ ಉಪಸ್ಥಿತಿ:** ಕಾರ್ಯಕ್ರಮದಲ್ಲಿ ಎನ್‌ಪಿಎ ಮಾಜಿ ಅಧ್ಯಕ್ಷ ನಾರಾಯಣಗೌಡ, ನಗರಸಭೆ ಆಯುಕ್ತ ಗಂಗಾಧರ್, ಸದಸ್ಯರಾದ ಆನಂದ್, ಪದ್ಮನಾಭ್, ಸಿಡಿಪಿಓ ನಾಗೇಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ನರಸಿಂಹಮೂರ್ತಿ, ನಗರಸಭೆ ನಾಮನಿರ್ದೇಶಿತ ಮಾಜಿ ಸದಸ್ಯ ವಸಂತ್, ಸ್ಥಳೀಯ ಮುಖಂಡರಾದ ಸಿ.ಎಂ.ಗೌಡ, ಮುನಿಯಪ್ಪ, ಮಂಜುಳಗಣೇಶ್, ಮಾರೇಗೌಡ, ಕೆಂಪರಾಜು, ರವಿಕುಮಾರ್, ಚಂದ್ರುಕುಮಾರ್ ಸೇರಿದಂತೆ ಹಲವು ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

### ಓಕಿನಾವ ಇಂಡಿಪೆಂಡೆನ್ಸ್ ಕಪ್ ಮುಡಿಗೇರಿಸಿಕೊಂಡ ಕೆ ಆರ್ ಸಿ ಆರ್ ಎಸ್ ಗರ್ಲ್ಸ್

**ವಿಜಯ ದುಂಬಿ ಸುದ್ದಿ....**

**ನಾಗಮಂಗಲ: ಕದಬಹಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ವಿದ್ಯಾರ್ಥಿನಿಯರು ಓಕಿನಾವ ಇಂಡಿಪೆಂಡೆನ್ಸ್ ಕಪ್ ಮುಡಿಗೇರಿಸಿಕೊಳ್ಳುವ ಮೂಲಕ ಸಾಧನೆ ಮೆರೆದಿದ್ದಾರೆ. ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಓಕಿನಾವ ಶೊರಿನ್ ಆರ್ ವೈ ಯು ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಶಾಲೆಯ 63 ವಿದ್ಯಾರ್ಥಿಗಳು ಸಹ ಗೆಲುವು ಸಾಧಿಸುವ ಮೂಲಕ ಚಾಂಪಿಯನ್‌ಶಿಪ್ ಟ್ರೋಫಿ ಪಡೆದುಕೊಂಡರು.**




ತರಬೇತುದಾರರಾದ ಭಾರತಿರವರು ಗ್ರಾಮೀಣ ಭಾಗದ ಈ ಮಕ್ಕಳು ನಗರ ಪ್ರದೇಶದ ಮಕ್ಕಳೊಂದಿಗೆ ಸೆಣಸಿ ಗೆಲುವು ಸಾಧಿಸಿದ್ದು ನಿಜಕ್ಕೂ ಶ್ಲಾಘನೀಯವೆಂದರು. ವಿದ್ಯಾರ್ಥಿಗಳ ಗೆಲುವಿಗೆ ಬೆನ್ನೆಲುಬಾಗಿ ನಿಂತ ಪ್ರಾಂಶುಪಾಲರು ಮತ್ತು ಶಿಕ್ಷಕರುಗಳಿಗೆ ಕೃತಜ್ಞತೆ ಸಲ್ಲಿಸಿದರು. ಶಾಲೆಯ ಪ್ರಾಂಶುಪಾಲರಾದ ಜಿ ಬಿ ಅನಿತ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ ಅಭಿನಂದಿಸಿದರು. ಶಿಕ್ಷಕರಾದ ಮಂಜುನಾಥ್ ನಾಯ್ಕ್, ಕೌಶಿಕ್ ಟಿ ವಿ, ಶಿವಾನಂದ ಸ್ವಾಮಿ, ಶ್ರೀನಿವಾಸ ಮೂರ್ತಿ, ಮನೋಜ್, ರಮ್ಯಾ,ಹೇಮಲತ ಇದ್ದರು.

### ಸಾಲದ ಸುಳಿಯಲ್ಲಿ ರೈತರು; ಕೇಂದ್ರದತ್ತ ಪರಮೇಶ್ವರ ಚಿತ್ತ: ಸಾಲ ಮನ್ನಾಕ್ಕೆ ಆಗ್ರಹ

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು: ಸಾಲದ ಹೊರೆ ಹಾಗೂ ಕೃಷಿ ಸಂಕಷ್ಟದಿಂದ ಬಳಲುತ್ತಿರುವ ರೈತರ ನೆರವಿಗೆ ಕೇಂದ್ರ ಸರ್ಕಾರ ಮುಂದಾಗಬೇಕು ಎಂದು ಡಿಸಿಎಂ ಡಾ.ಜಿ. ಪರಮೇಶ್ವರ ಒತ್ತಾಯಿಸಿದ್ದಾರೆ. ರೈತರ ಸಾಲ ಮನ್ನಾ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿರುವ ಅವರು, ಅನ್ನದಾತರ ಸಂಕಷ್ಟಕ್ಕೆ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದ್ದಾರೆ.**



ಇಂದು ಸದಾಶಿವನಗರದ ನಿವಾಸದ ಬಳಿ ಮಾಧ್ಯಮದವರೊಂದಿಗೆ ಮಾತನಾಡಿ, ಕೇಂದ್ರದಿಂದ ರೈತರ ಸಾಲ ಮನ್ನಾ ಮಾಡಿದರೆ ಮುಗಿದೇ ಹೋಗುತ್ತದೆ. ಆಂಧ್ರ, ತೆಲಂಗಾಣ, ಮಹಾರಾಷ್ಟ್ರ, ಉತ್ತರ ಪ್ರದೇಶ, ಬಿಹಾರದ ಕೆಲವು ಭಾಗಗಳಲ್ಲಿ ಬರ ಇದೆ. ಹಾಗಾಗಿ ಇಡೀ ದೇಶದಲ್ಲಿ ಯಾವ ರೀತಿಯಲ್ಲಿ ಡಾ. ಮನಮೋಹನ್ ಸಿಂಗ್ ಅವರು 72 ಸಾವಿರ ಕೋಟಿ ಹಣವನ್ನು ಮನ್ನಾ ಮಾಡಿದ್ದರೋ, ಅದೇ ರೀತಿಯಾಗಿ ಕೇಂದ್ರ ಸರ್ಕಾರ ಮನ್ನಾ ಮಾಡಿದರೆ ದೇಶದ ಎಲ್ಲಾ ರೈತರಿಗೆ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರವನ್ನು ಈ ಬಗ್ಗೆ ಒತ್ತಾಯ ಮಾಡುತ್ತೇನೆ ಎಂದರು. ರಾಜ್ಯದಲ್ಲಿ ಬರ ಪರಿಶೀಲನೆಯನ್ನು ನಡೆಸಿ, 101 ತಾಲೂಕುಗಳನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಿದ್ದೇವೆ. ಶೀಘ್ರವೇ ಬರ ವರದಿಯನ್ನು ಸಿದ್ಧಪಡಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತೇವೆ ಎಂದು ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ.ಜಿ.ಪರಮೇಶ್ವರ ಅವರು ತಿಳಿಸಿದರು. ಇನ್ನೂ 15 ದಿನಗಳಿಗೆ ಪರಿಶೀಲನೆ ಮಾಡುತ್ತೇವೆ. ಬಳಿಕ 40ರಿಂದ 50 ತಾಲೂಕುಗಳು ಬರಪೀಡಿತ ಪ್ರದೇಶದ ವರ್ಗಕ್ಕೆ ಬರುವ ಸಾಧ್ಯತೆ ಇರುತ್ತದೆ. ಆಗ ಮತ್ತೆ ಘೋಷಣೆ ಮಾಡುತ್ತೇವೆ. ಈ ಮಧ್ಯೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕೇಂದ್ರಕ್ಕೆ ಸಲ್ಲಿಸುತ್ತೇವೆ. ಆ ಬಳಿಕ ಕೇಂದ್ರದಿಂದ ತಂಡಗಳು ಬಂದು ರಾಜ್ಯದಲ್ಲಿ ಸಮೀಕ್ಷೆ ನಡೆಸುತ್ತಾರೆ. ನಂತರ ಬರ ಪರಿಹಾರ ಬಿಡುಗಡೆಯಾಗುತ್ತದೆ ಎಂದು ಮಾಹಿತಿ ನೀಡಿದರು.

# ನೇಪಾಳ ದುರಂತ: ನಾಪತ್ತೆಯಾದ ಬೆಂಗಳೂರು ಗ್ರಾಮಾಂತರ ಮೂಲದ ನಿವಾಸಿಗಳ ಮಾಹಿತಿ ನೀಡಲು ಸರ್ಕಾರದ ಮನವಿ

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು ಗ್ರಾಮಾಂತರ: ನೇಪಾಳದಲ್ಲಿ ಸಂಭವಿಸಿದ ಪ್ರಕೃತಿ ವಿಕೋಪ ಹಾಗೂ ದಿಡೀರ್ ಪ್ರವಾಹ (ಫ್ಲಾಶ್ ಫ್ಲಡ್ಸ್ )ದುರಂತಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮೂಲದ ಪ್ರವಾಸಿಗರು ಅಥವಾ ನಾಗ-ರಿಕರು ಯಾರಾದರೂ ನಾಪತ್ತೆಯಾಗಿದ್ದರೆ ಅಥ-'ವಾ ಸಂಪರ್ಕಕ್ಕೆ ಸಿಗದೇ ಇದ್ದಲ್ಲಿ ತಕ್ಷಣವೇ ಅವರ ವಿವರಗಳನ್ನು ಒದಗಿಸುವಂತೆ ಜಿಲ್ಲಾಧಿಕಾರಿ ಡಾ. ಕೆ.ಎನ್ ಅನುರಾಧ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.**

ಕೇಂದ್ರ ಗೃಹ ಸಚಿವಾಲಯ ಹಾಗೂ ವಿದೇಶಾಂಗ ವ್ಯವಹಾರಗಳ



ಸಚಿವಾಲಯದೊಂದಿಗೆ ರಾಜ್ಯ ಸರ್ಕಾರವು ಸತತ ಸಂಪರ್ಕದಲ್ಲಿದ್ದು ಸಂತ್ರಸ್ತ ಕುಟುಂಬಗಳಿಗೆ ಅಗತ್ಯ ನೆರವು ನೀಡಲು ಮತ್ತು ನಾಪತ್ತೆಯಾದವರನ್ನು ಪತ್ತೆ ಹಚ್ಚಲು ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳುತ್ತಿದೆ.

ನೇಪಾಳದಲ್ಲಿ ನಿಮ್ಮ ಕುಟುಂಬಸ್ಥರು ಸ್ನೇಹಿತರು ಅಥವಾ ಯಾರಾದರೂ ನಾಪತ್ತೆಯಾಗಿದ್ದಾರೆಂದು ಶಂಕಿಸಲಾಗಿದ್ದರೆ ಸಾರ್ವಜನಿಕರು ನಾಪತ್ತೆಯಾದ ವ್ಯಕ್ತಿಯ ಪೂರ್ಣ ಪರಿಚಯ ಹೆಸರು, ಮೊಬೈಲ್ ಸಂಖ್ಯೆ, ಕೊನೆಯದಾಗಿ ಸಂಪರ್ಕಿಸಿದ ಸ್ಥಳ ಮತ್ತು ಸಮಯ ಹಾಗೂ ಖಾಯಂ ವಿಳಾಸದ ವಿವರಗಳನ್ನು ಸರ್ಕಾರಕ್ಕೆ ಅಥವಾ ಜಿಲ್ಲಾಡಳಿತಕ್ಕೆ ತಕ್ಷಣವೇ ಒದಗಿಸಲು ಕೋರಲಾಗಿದೆ.

ಸಂತ್ರಸ್ತರು ಅವರ ಕುಟುಂಬಸ್ಥರ ನೆರವಿಗಾಗಿ ಕೇಂದ್ರ ಸಹಾಯವಾಣಿ ತೆರೆದಿದ್ದು ಸಾರ್ವಜನಿಕರು 1070 ಅಥವಾ 080-22253707ಗೆ ಕರೆ ಮಾಡಬಹುದು ಅಥವಾ ಜಿಲ್ಲಾಧಿಕಾರಿಗಳ ಕಾರ್ಯಾಲಯ ದೂರವಾಣಿ ಸಂಖ್ಯೆ 080-28388005 (1077) ಕರೆ ಮಾಡಿ ಮಾಹಿತಿ ನೀಡಬಹುದು. ಇ-ಮೇಲ್ ಮೂಲಕ ಮಾಹಿತಿ ನೀಡಲು seockarnataka@gmail.com ವಿಳಾಸಕ್ಕೆ ಕಳುಹಿಸಬಹುದಾಗಿದೆ.

ಅಲ್ಲದೆ ನೇಪಾಳದಲ್ಲಿ ಸಿಲುಕಿರುವ ಭಾರತೀಯರಿಗೆ ತುರ್ತು ನೆರವು ನೀಡಲು ಭಾರತೀಯ ರಾಯಭಾರಿ ಕಚೇರಿಯ ತುರ್ತು ವಾಟ್ಸಪ್ ಹಾಗೂ ಕರೆ ಸಂಖ್ಯೆಗಳನ್ನು ಬಿಡುಗಡೆ ಮಾಡಿದೆ. +977 9851316807, +977 9709107500, 9810326117 ಸಂಖ್ಯೆಗಳನ್ನು ನೇರವಾಗಿ ಅಥವಾ ವಾಟ್ಸಪ್ ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಲು ಹಾಗೂ ನೆರವು ಕೋರಲು ಪ್ರಕಟಣೆಯಲ್ಲಿ ತಿಳಿಸಿದೆ.

## ದಲಿತ ವಿರೋಧಿ ಸರ್ಕಾರ: ಸೆ. 1ರಂದು ಕಲಬುರಗಿಯಲ್ಲಿ ಡಿಎಸ್‌ಎಸ್ ಪ್ರತಿಭಟನೆ

**ವಿಜಯ ದುಂಬಿ ಸುದ್ದಿ....**

**ಕಲಬುರಗಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ನಂತರ ದಲಿತರ ಮೇಲಿನ ಕೊಲೆ, ಅತ್ಯಾಚಾರ ಹಾಗೂ ಜಾತಿ ನಿಂದನೆಯಂತಹ ದೌರ್ಜನ್ಯಗಳು ಹೆಚ್ಚುತ್ತಿವೆ ಎಂದು ಆರೋಪಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ॥ ಬಿ. ಕೃಷ್ಣಪ್ಪ ಸ್ಥಾಪಿತ) ವತಿಯಿಂದ ಸುದ್ದಿಗೋಷ್ಠಿ ನಡೆಸಲಾಯಿತು.**

ವಿಶೇಷವಾಗಿ ರಾಯಚೂರು ಜಿಲ್ಲೆಯ ಹದ್ದಿನಾಳ ಗ್ರಾಮದ ಭೂಮಾನಂದರ ಕೊಲೆ, ವಕ್ರಾಣಿ ಗ್ರಾಮದ ದಲಿತ ಯುವತಿಯ ಅತ್ಯಾಚಾರ-ಕೊಲೆ ಹಾಗೂ ಕರಡಕಲ್ ಗ್ರಾಮದ ರಾಣೆಮ್ಮ ಅವರ ಕೊಲೆ ಪ್ರಕರಣಗಳು ಜಿಲ್ಲೆಯ




ಕಾನೂನು ಸುವ್ಯವಸ್ಥೆಯ ಕುಸಿತಕ್ಕೆ ಸಾಕ್ಷಿಯಾಗಿವೆ ಎಂದು ಮುಖಂಡರು ದೂರಿದರು.

**ಪ್ರಮುಖ ಬೇಡಿಕೆಗಳು:** ಕರ್ತವ್ಯಲೋಪ ಎಸಗಿರುವ ರಾಯಚೂರು ಜಿಲ್ಲಾಧಿಕಾರಿ ಮತ್ತು ಎಸ್ಪಿಯನ್ನು ತಕ್ಷಣ ವರ್ಗಾವಣೆ ಮಾಡಬೇಕು.ಮೃತಪಟ್ಟ ಮೂವರ ಕುಟುಂಬಗಳಿಗೆ ತಲಾ 1.00 ಕೋಟಿ ಪರಿಹಾರ ಹಾಗೂ ಸರ್ಕಾರಿ ನೌಕರಿ ನೀಡಬೇಕು. ದೌರ್ಜನ್ಯ ತಡೆಯಲು ವಿಫಲರಾಗುವ ಜಿಲ್ಲಾಧಿಕಾರಿ ಹಾಗೂ ಎಸ್‌ಪಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಬೇಕು.

ಸರ್ಕಾರದ ದಲಿತ ವಿರೋಧಿ ನೀತಿಯನ್ನು ಖಂಡಿಸಿ ಸೆಪ್ಟೆಂಬರ್ 1 ರಂದು ಕಲಬುರಗಿಯ ತಿಮ್ಮಾಪೂರಿ ಸರ್ಕಲ್‌ನಿಂದ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ಸಂಘಟನೆಯ ರಾಜ್ಯ ಸಂಘಟನಾ ಸಂಚಾಲಕ ಸುರೇಶ ಮಂಗನ್, ಧರ್ಮಣ್ಣ ಕೋಣೆಕರ್, ಭೀಮಶಾ ಖನ್ನಾ ಸೇ-ರಿದಂತೆ ಹಲವು ಮುಖಂಡರು ತಿಳಿಸಿದ್ದಾರೆ.

## ಅವೈಜ್ಞಾನಿಕ ರಸ್ತೆ ಕಾಮಗಾರಿ: ಜಿಲ್ಲಾಧಿಕಾರಿಗಳಿಗೆ ವಿಜಯಪುರ ನಾಗರೀಕ ಹಿತರಕ್ಷಣಾ ಸಮಿತಿ ಮನವಿ



**ವಿಜಯ ದುಂಬಿ ಸುದ್ದಿ....**

**ದೇವನಹಳ್ಳಿ: ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಪಟ್ಟಣದಲ್ಲಿ ಕಳೆದ ಎರಡು ವರ್ಷಗಳಿಂದ ನಡೆಯುತ್ತಿರುವ ರಸ್ತೆ ಕಾಮಗಾ-ರಿಯು ತೀರಾ ಅವೈಜ್ಞಾನಿಕವಾಗಿದ್ದು, ಸಾರ್ವಜನಿಕರು ಪ್ರತಿನಿತ್ಯ ತೀವ್ರ ತೊಂದರೆ ಎದುರಿಸುವಂತಾಗಿದೆ. ಲೋಕೋಪಯೋಗಿ ಇಲಾಖೆ (PWD) ಅಧಿಕಾರಿಗಳ ಬೇಜವಾಬ್ದಾರಿ ತನ ಮತ್ತು ಪ್ರಭಾವಿಗಳ ಒತ್ತಡಕ್ಕೆ ಮಣಿದು ಕಾಮಗಾರಿ ನಡೆಸಲಾಗುತ್ತಿದೆ ಎಂದು ಆರೋಪಿಸಿ ವಿಜಯಪುರ ನಾಗರೀಕ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.**

ಮನವಿಯ ಪ್ರಮುಖ ವಿವರಗಳು:

ಅವೈಜ್ಞಾನಿಕ ಕಾಮಗಾರಿ: ರಸ್ತೆ ಕಾಮಗಾರಿ ಆರಂಭಿಸುವ ಮುನ್ನ ಅಧಿಕಾ-ರಿಗಳು ಅಳತೆ ಮಾಡಿ ಗುರುತಿಸಿದ್ದ ಸ್ಥಳದಂತೆ ಈಗ ಕೆಲಸ ನಿರ್ವಹಿಸುತ್ತಿಲ್ಲ.

ಚರಂಡಿ ಮತ್ತು ವಿದ್ಯುತ್ ಕಂಬಗಳ ಸಮಸ್ಯೆ: ರಸ್ತೆಯನ್ನು ತಗ್ಗು ಮಾಡಿ, ಚರಂಡಿಗಳನ್ನು ಎತ್ತರ ಮಾಡಲಾಗಿದೆ. ಇದರಿಂದ ಮಳೆ ನೀರು ಚರಂಡಿಯಲ್ಲಿ ಹರಿಯದೆ ರಸ್ತೆಯ ಮೇಲೆಯೇ ನಿಲ್ಲುತ್ತಿದೆ. ಜೊತೆಗೆ ವಿದ್ಯುತ್ ಕಂಬಗಳನ್ನು ಚರಂಡಿಯಿಂದ ಹೊರಗೆ ಹಾಕುವ ಬದಲು ಪಾದಚಾರಿ ಮಾರ್ಗದಲ್ಲೇ ಅಳವಡಿಸಲಾಗುತ್ತಿದೆ.

**ನಿಯಮಗಳ ಉಲ್ಲಂಘನೆ:** ಪಟ್ಟಣದ ಕೆಲ ಪ್ರಭಾವಿ ವ್ಯಕ್ತಿಗಳ ಒತ್ತಾಯಕ್ಕೆ ಮಣಿದಿರುವ ಅಧಿಕಾರಿಗಳು, ರಸ್ತೆ ಕಾಮಗಾರಿಯ ನಿಯಮಗಳನ್ನು ಗಾಳಿಗೆ ತೂರಿ ಒಂದೊಂದು ಕಡೆ ಒಂದೊಂದು ಅಳತೆಯಲ್ಲಿ ಕಾಮಗಾರಿ ನಡೆಸುತ್ತಿದ್ದಾರೆ.

ತನಿಖೆಗೆ ಆಗ್ರಹ: ಲೋಕೋಪಯೋಗಿ ಇಲಾಖೆಯ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಈ ಸಂಪೂರ್ಣ ಕಾಮಗಾರಿ ಹಾಗೂ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ, ರಸ್ತೆ ಕಾಮಗಾರಿಯನ್ನು ಸರಿಪಡಿಸಬೇಕೆಂದು ಸಮಿತಿ ಆಗ್ರಹಿಸಿದೆ.

ಮನವಿ ಸ್ವೀಕರಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಡಾ. ಕೆ.ಎನ್. ಅನುರಾಧ ಅವರು, ಶೀಘ್ರದಲ್ಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ವಿಜಯಪುರ ನಾಗರೀಕ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳಾದ ಪುರ ಕೃಷ್ಣ, ಮೆಕ್ಯಾನಿಕ್ ನಾಗರಾಜ್, ಮಹೇಶ್ (ಕರವೇ), ಬಚ್ಚೇಗೌಡ, ಕೃಷ್ಣಮೂರ್ತಿ, ರಮೇಶಬಾಬು ಹಾಗೂ ಸುಪ್ರೀತ್ ಉಪಸ್ಥಿತರಿದ್ದರು.

# ಶಿಕ್ಷಣ ಕ್ಷೇತ್ರ ಹಾಗೂ ಶಿಕ್ಷಕ ಸಮುದಾಯದ ಪ್ರಗತಿಗೆ ಧ್ವನಿಯಾಗಿರುವೆ

**ವಿಜಯ ದುಂಬಿ ಸುದ್ದಿ....**

**ದೇವನಹಳ್ಳಿ: ಮೂರು ಬಾರಿ ಶಿಕ್ಷಕರ ಬೆಂಬಲದಿಂದ ವಿಧಾನ ಪರಿಷತ್ ಸದಸ್ಯನಾಗಿ ಆಯ್ಕೆಯಾಗಿದ್ದು, ಶಿಕ್ಷಣ ಕ್ಷೇತ್ರ ಹಾಗೂ ಶಿಕ್ಷಕ ಸಮುದಾಯದ ಪ್ರಗತಿಗೆ ಧ್ವನಿಯಾಗಿ ಕೆಲಸ ಮಾಡಿರುವೆ ಎಂದು ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ತಿಳಿಸಿದರು.**

ಇಲ್ಲಿನ ದೇವನಹಳ್ಳಿ ರಸ್ತೆಯ ಗಿರಿಜಾ ಶಂಕರ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಖಾಸಗಿ ಶಿಕ್ಷಣ ಆಡಳಿತ ಮಂಡಳಿ ಸದಸ್ಯರು ಹಾಗೂ ಶಿಕ್ಷಕರ ಸಭೆಯಲ್ಲಿ ಅವರು ಮಾತನಾಡಿದರು. ದೇಶದ ಭವಿಷ್ಯದ ಪ್ರಜೆಗಳನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಹಿರಿದಾಗಿದ್ದು, ಶಿಕ್ಷಕ ಸಮುದಾಯದ ಸಮಸ್ಯೆಗಳನ್ನು ಪರಿಹ-ರಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವೆ.



ಪ್ರಾಮಾಣಿಕತೆಯಿಂದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಉತ್ತಮ ವಾತಾವರಣದಲ್ಲಿ ಕಾರ್ಯನಿರ್ವಹಿಸುವಂತೆ ಪ್ರತಿಯೊಬ್ಬರಿಗೂ ಸ್ಪಂದಿಸಿ ಕರ್ತವ್ಯ ನಿರ್ವಹಿಸಿದ್ದೇನೆ ಎಂದರು.

ಸರ್ಕಾರ ಶಿಕ್ಷಕರಿಗೆ ಪಾಠ ಮಾಡಲು ಬಿಡದೇ ಹಲವು ಕಾರ್ಯಗಳಿಗೆ ನಿಯೋಜಿಸುತ್ತಿರುವ ಬಗ್ಗೆ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತರಲಾಗಿದೆ. ಶಿಕ್ಷಕರನ್ನು ಯಾವುದೇ ಕಾರಣ-ಕ್ಕೂ ಅನ್ಯ ಕೆಲಸಗಳಿಗೆ ನೇಮಿಸಬಾರದು. ಇದ-ರಿಂದ ಮಕ್ಕಳ ವಿದ್ಯಾಭ್ಯಾಸ ಮೇಲೆ ಪರಿಣಾಮ ಬೀಳಲಿದೆ ಎಂದು ಒತ್ತಾಯಿಸಲಾಗಿದೆ ಎಂದರು. ಕಳೆದ 25 ವರ್ಷಗಳಿಂದ ಶಿಕ್ಷಕರು ನನ್ನ ಮೇಲೆ ಭರವಸೆಯಿಟ್ಟು ಮತ ನೀಡುತ್ತಾ ಬಂದಿದ್ದಾರೆ. ಇದುವರೆಗೆ ಯಾವುದೇ ಶಿಕ್ಷಕರಿಗಾಗಲಿ ಅಥ-'ವಾ ಖಾಸಗಿ ಸಂಸ್ಥೆಗಳಿಗಾಗಲಿ ಅನಾವಶ್ಯಕ ತೊಂದರೆಯಾಗದಂತೆ ನೋಡಿಕೊಂಡಿದ್ದೇನೆ. ಕೊರೊನಾ ಸಂಕಷ್ಟದ ಸಮಯದಲ್ಲಿ ಖಾಸಗಿ ಶಾಲಾ ಶಿಕ್ಷಕರಿಗಾಗಿ ಸರ್ಕಾರದಿಂದ 105 ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿದೆ ಎಂದು ಹೇಳಿದರು.

ವಿಧಾನಸೌಧದಲ್ಲಿ ನಿರಂತರವಾಗಿ ಶಿಕ್ಷಕರ ಧ್ವನಿಯಾಗಿ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದ್ದು, ಮುಂಬರುವ ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದು, ತಮ್ಮನ್ನು ಮತ್ತೆ ಆಶೀರ್ವದಿಸಬೇಕೆಂದು ಮನವಿ ಮಾಡಿದರು. ಶಿಕ್ಷಕರು ಹಾಗೂ ಖಾಸಗಿ ಸಂಸ್ಥೆಗಳ ಆಡಳಿತ ಮಂಡಳಿಯವರು ಯಾವುದೇ ಸಮಸ್ಯೆ ಹೊತ್ತು ಪುಟ್ಟಣ್ಣನವರ ಮನೆಗೆ ತೆರಳಿದರೂ ತಕ್ಷಣ ಸ್ಪಂದಿಸುತ್ತಾರೆ. ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಚನೆ ನೀಡಿ ಪರಿಹರಿಸುವ ಇಂತಹ ಜನಪ್ರತಿನಿಧಿಯ ಅಗತ್ಯ ಎಲ್ಲಾ ಕ್ಷೇತ್ರಗಳಿಗೂ ಇದೆ ಎಂದು ಪ್ರಗತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಸತೀಶ್ ಕುಮಾರ್ ಹೇಳಿದರು.

ತಾಲ್ಲೂಕು ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ಪಿ.ಎಂ. ಕೊಟ್ರೇಶ್, ಅನಂತ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೆಂಪೇಗೌಡ, ಗುರುಕುಲ ವಿದ್ಯಾ ಸಂಸ್ಥೆಯ ಸುರೇಶ್, ಎಂ.ವಿ. ಶಿಕ್ಷಣ ಸಂಸ್ಥೆಯ ಯಲಿಯೂರು ತ್ಯಾಗರಾಜ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎನ್.ನಾಗರಾಜ್, ಪ್ರಗತಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವಿ.ಬಸವರಾಜು, ಪ್ರಗತಿ ಸಂಯುಕ್ತ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಸುರೇಶ್ ಇದ್ದರು.

# ನೀರಾವರಿ ಯೋಜನೆಗಳಿಗೆ ವೇಗ ನೀಡಿ: ಭೂಸ್ವಾಧೀನ ವ್ಯಾಜ್ಯ ಇತ್ಯರ್ಥಕ್ಕೆ ಮಧ್ಯಸ್ಥಿಕೆ ಮೊರೆ

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು: ರಾಜ್ಯದ ನೀರಾವರಿ ಮತ್ತು ಜಲಸಂಪನ್ಮೂಲ ಯೋಜನೆಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವ ನಿಟ್ಟಿನಲ್ಲಿ ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಅವರು ಇಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ವಿಧಾನಸೌಧದ 3ನೇ ಮಹಡಿಯಲ್ಲಿ ಕೃಷ್ಣಾ, ಕಾವೇರಿ, ವಿಶ್ವೇಶ್ವರಯ್ಯ ಹಾಗೂ ಕರ್ನಾಟಕ ನೀರಾವರಿ ನಿಗಮಗಳ ಉನ್ನತ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಸುದೀರ್ಘವಾಗಿ ಪರಾಮರ್ಶಿಸಿದರು.**

ಕೆರೆ ತುಂಬಿಸಲು, ಅಂತರಜಲ ಹೆಚ್ಚಿಸಲು ಖಡಕ್ ಸೂಚನೆ

ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ನೀರನ್ನು ಪಂಪ್ ಮಾಡಿ ಕೆರೆ-ಕಟ್ಟೆಗಳನ್ನು ಭರ್ತಿ ಮಾಡಲು ಆದ್ಯತೆ ನೀಡಬೇಕು. ಅಂತರಜಲ ಹೆಚ್ಚಳಕ್ಕೆ ಸಾಂಪ್ರದಾಯಿಕ ವಿಧಾನಗಳ ಜೊತೆಗೆ ವೈಜ್ಞಾನಿಕ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗಪಿಕ-3 ಭೂಸ್ವಾಧೀನಕ್ಕೆ 'ಮಧ್ಯಸ್ಥಿಕೆ' ಮದ್ದು




ಕೃಷ್ಣಾ ಮೇಲ್ದಂಡೆ ಯೋಜನೆ (UKP-3) ಹಂತ 1 ಮತ್ತು 2ರಲ್ಲಿ ಸುಮಾರು 20 ವರ್ಷಗಳಿಂದ ನ್ಯಾಯಾಲಯದಲ್ಲಿ ಬಾಕಿ ಇರುವ 1,500 ಭೂಸ್ವಾಧೀನ ಪ್ರಕರಣಗಳನ್ನು 'ಮಧ್ಯಸ್ಥಿಕೆ' (Mediation) ಮೂಲಕ ತ್ವರಿತವಾಗಿ ಇತ್ಯರ್ಥಪಡಿಸಿ, 9 ಉಪ-ಯೋಜನೆಗಳ ಕೆಲಸ ಚುರುಕುಗೊಳಿಸಲು ತಿಳಿಸಲಾಯಿತು. ಸಚಿವ ಸಂಪುಟ ಘೋಷಿಸಿರುವ ಪರಿಹಾರದ ಹಣ ಶೀಘ್ರದಲ್ಲೇ ಬಿಡುಗಡೆಯಾಗಲಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

**ಪ್ರಮುಖ ಯೋಜನೆಗಳ ಸ್ಥಿತಿಗತಿ:**

● ಮೇಕೆದಾಟು ಯೋಜನೆ: 67 ಟಿಎಂಸಿ ಸಾಮರ್ಥ್ಯದ ಪರಿಷ್ಕೃತ ಡಿಪಿಆರ್ ಅನ್ನು ಆಗಸ್ಟ್ 13ರಂದು ಕೇಂದ್ರಕ್ಕೆ ಕಳುಹಿಸಲಾಗಿದೆ. ಡ್ಯಾಂ ಸುತ್ತಲೂ ನೀರಾವರಿ ಪ್ರದೇಶವಿಲ್ಲ ಎಂದು ಸ್ಪಷ್ಟಪಡಿಸುವ ಮೂಲಕ ತಮಿಳುನಾಡಿನ ಆಕ್ಷೇಪಗಳಿಗೆ ಉತ್ತರ ನೀಡಲಾಗಿದ್ದು, ಈ ಬಗ್ಗೆ ಶೀಘ್ರದಲ್ಲೇ ಪ್ರತ್ಯೇಕ ಸಭೆ ನಡೆಯಲಿದೆ.

● ಮಹದಾಯಿ (ಕಳಸಾ-ಬಂಡೂರಿ): ಕೇಂದ್ರ ಜಲ ಆಯೋಗ (CWC) ಪರಿಷ್ಕೃತ ಡಿಪಿಆರ್‌ಗೆ ಅನುಮತಿ ನೀಡಿದೆ. ನ್ಯಾಷನಲ್ ಬೋರ್ಡ್ ಫಾರ್ ವೈಲ್ಡ್ ಲೈಫ್ (NBWL) ಕ್ಲಿಯರೆನ್ಸ್ ಪ್ರಕ್ರಿಯೆ ಚುರುಕುಗೊಳಿಸಲು ಅರಣ್ಯ ಇಲಾಖೆಗೆ ಪತ್ರ ಬರೆಯಲು ನಿರ್ದೇಶಿಸಲಾಯಿತು.

● ಎತ್ತಿನಹೊಳೆ ಯೋಜನೆ: 256 ಕಿ.ಮೀ ಉದ್ದದ ಕಾಲುವೆಯಲ್ಲಿ ಈಗಾಗಲೇ 40 ಕಿ.ಮೀ ವರೆಗೆ ನೀರು ಹರಿದಿದೆ. ಮೊದಲ ಹಂತದ ಅರಣ್ಯ ಬಳಕೆಗೆ ಕೇಂದ್ರದ ಒಪ್ಪಿಗೆ ಸಿಕ್ಕಿದ್ದು, ಉಳಿದ ಸಮಸ್ಯೆಯನ್ನು ಬಗೆಹರಿಸಲು ಹಾಸನ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ.

● ಭದ್ರಾ ಮೇಲ್ದಂಡೆ: 2023-24ರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಘೋಷಿಸಿದ್ದ 5,300 ಕೋಟಿ ರೂ. ನೆರವು ಇನ್ನೂ ಬಿಡುಗಡೆಯಾಗದಿರುವ ಬಗ್ಗೆ ಸಭೆಯಲ್ಲಿ ಕಳವಳ ವ್ಯಕ್ತವಾಯಿತು.

* ತುಂಗಭದ್ರಾ ಡ್ಯಾಂ: ಗೇಟ್‌ಗಳ ಹೊಸ ಅಳವಡಿಕೆ ಪೂರ್ಣಗೊಂಡಿದ್ದು, ನವಲಿ ಸಮತೋಲನಾ ಜಲಾಶಯ ನಿರ್ಮಾಣದ ಕುರಿತೂ ಚರ್ಚಿಸಲಾಯಿತು.

ಆರ್ಥಿಕ ಸಮಸ್ಯೆಗೆ ಶೀಘ್ರ ಪರಿಹಾರ

ಇಲಾಖೆಯಲ್ಲಿ ಪ್ರಸ್ತುತ 16,000 ಕೋಟಿ ರೂ. ಮೊತ್ತದ ಹೊಸ ಯೋಜನೆಗಳು ಪ್ರಗತಿಯಲ್ಲಿದ್ದು, ಬಾಕಿ ಬಿಲ್‌ಗಳ ಪಾವತಿ ಮತ್ತು ಆರ್ಥಿಕ ಸವಾಲುಗಳ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆಸಲಾಗಿದೆ. ಪ್ರತ್ಯೇಕ ಸಭೆ ಕರೆದು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಸಚಿವರು ಭರವಸೆ ನೀಡಿದರು. ವಿಶ್ವಬ್ಯಾಂಕ್ ನೆರವಿನÀ DRIP ಮತ್ತು M-CADWM ಯೋಜನೆಗಳ ಪ್ರಗತಿಯನ್ನೂ ಪರಿಶೀಲಿಸಲಾಯಿತು. ಸಭೆಯಲ್ಲಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಸೇರಿದಂತೆ ನಾಲ್ಕೂ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಉನ್ನತ ಅಧಿಕಾರಿಗಳು ಭಾಗವಹಿಸಿದ್ದರು.

## ಗ್ರ್ಯಾಂಡ್ ಚೆಸ್ ಟೂರ್ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಪ್ರಜ್ಞಾನಂದ

**ವಿಜಯ ದುಂಬಿ ಸುದ್ದಿ....**

**ಸೇಂಟ್ ಲೂಯಿಸ್, ಆ.28- ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿ ನಡೆದ ಗ್ರ್ಯಾಂಡ್ ಚೆಸ್ ಟೂರ್ (ಜಿಸಿಟಿ) ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇಲ್ಲಿನ ಗ್ರ್ಯಾಂಡ್ ಫಿನಾಲೆಯಲ್ಲಿ ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಫ್ಯಾಬಿಯಾನೊ ಕರುವಾನಾ ಅವರನ್ನು ಮಣಿಸುವ ಮೂಲಕ ಪ್ರಜ್ಞಾನಂದ ಅವರು ಈ ಐತಿಹಾಸಿಕ ಸಾಧನೆ ಮಾಡಿದ್ದಾರೆ.**



ದಿನಪತ್ರಿಕೆ ಚಂದಾದಾರರಾಗಿ

ಆರಂಭದಲ್ಲಿ ಕರುವಾನಾ ವಿರುದ್ಧ ಹಿನ್ನಡೆ ಅನುಭವಿಸಿದ ಪ್ರಜ್ಞಾನಂದ, ಬಳಿಕ ಅದ್ಭುತ ಪ್ರದರ್ಶನ ನೀಡಿ ಪಂದ್ಯದಲ್ಲಿ ಭರ್ಜರಿ ತಿರುಗೇಟು ನೀಡಿದರು. ಅಂತಿಮವಾಗಿ ಕರುವಾನಾ ಅವರನ್ನು 15-13 ಅಂಕಗಳಿಂದ ಮಣಿಸಿ ಚೊಚ್ಚಲ ಗ್ರ್ಯಾಂಡ್ ಚೆಸ್ ಟೂರ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಈ ಗೆಲುವಿನೊಂದಿಗೆ ಪ್ರಜ್ಞಾನಂದ ಅವರು 2 ಲಕ್ಷ ಅಮೆರಿಕನ್ ಡಾಲರ್ ಬಹುಮಾನವನ್ನೂ ತಮ್ಮದಾಗಿಸಿಕೊಂಡಿದ್ದಾರೆ. ಅವರ ಈ ಸಾಧನೆ ಭಾರತೀಯ ಕ್ರೀಡಾಭಿಮಾನಿಗಳಲ್ಲಿ ಸಂಭ್ರಮ ಮೂಡಿಸಿದೆ.

# ನಕಲಿ ಆಸ್ಪತ್ರೆಗೆ ಡಿಹೆಚ್ಓ ಮಂಜುನಾಥ್ ಮಾಡಿದ್ದೇನು!?

## ಜಿಲ್ಲಾಧಿಕಾರಿಗಳ ಮೌನ, ಆರೋಗ್ಯ ಸಚಿವರ ಮೇಲೆ ಆಕ್ರೋಶ

**ವಿಜಯ ದುಂಬಿ ಸುದ್ದಿ....**

**ನೆಲಮಂಗಲ: ಕೆಪಿಎಂಇ ನೊಂದಣಿ ಇಲ್ಲದೆ ರಾಜರೋಷವಾಗಿ ನಗರದ ಹೃದಯಭಾಗದಲ್ಲಿ ನಡೆಯುತ್ತಿರುವ ನಕಲಿ ಆಸ್ಪತ್ರೆಗೆ ಬೆಂಗಳೂರು ಗ್ರಾಮಾಂತರ ಡಿಹೆಚ್ ಓ ಮಂಜುನಾಥ್ ಏನು ಮಾಡಿದ್ದಾರೆ ಎಂಬ ಯಕ್ಷ ಪ್ರಶ್ನೆಗಳ ಜತೆ ವೈದ್ಯ ಆರೋಪ ಮಾಡಿದ 2 ಲಕ್ಷ ಆರೋಪ ಸತ್ಯ ಎಂಬುದಾಗಿ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದ್ದು ಆರೋಗ್ಯ ಸಚಿವ ಯುಟಿ ಖಾದರ್ ಮೇಲೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

ಕೆಪಿಎಂಇ ನೊಂದಣಿ ಮುಗಿದು 6 ತಿಂಗಳಾಗಿದ್ದು ಡಿಎಚ್‌ಓ ಮೇಲೆ 2 ಲಕ್ಷ ಲಂಚದ ಆರೋಪ ಮಾಡಿದ್ದಲ್ಲದೇ 2023ರ ಪ್ರಕರಣ ಮುಂದೆ ಇಟ್ಟುಕೊಂಡು ಬ್ಲಾಕ್ ಮೇಲ್ ಮಾಡುತ್ತಿರುವ ಕೇರ್ ಏಷ್ಯಾ ಆಸ್ಪತ್ರೆ ಹಾಗೂ ವೈಧ್ಯ ಶ್ರೀನಿವಾಸ್ ಮೇಲೆ ಪ್ರಕರಣವಾಗಿ ಎರಡು ವಾರವಾದರೂ ಯಾವುದೇ ಕ್ರಮವಾಗಿಲ್ಲ.



ಡಿಹೆಚ್ ಓ ಮೇಲೆ ಇಂತಹ ಗಂಭೀರ ಆರೋಪ ಬಂದಿರುವುದು ಸರಕಾರದ ಕಾನೂನು ಅನ್ವಯ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ ಮಾಲೀಕರಿಂದಲ್ಲ, ಕಾನೂನಿನ ಎಲ್ಲಾ ನಿಯಮಗಳನ್ನು ಮೀರಿ, ಯಾವುದೇ ಅನುಮತಿಯಿಲ್ಲದೆ ರಾಜಾರೋಷವಾಗಿ ಕಾನೂನುಬಾಹಿರವಾಗಿ ನಡೆಸುತ್ತಿರುವ ಆಸ್ಪತ್ರೆ ಮಾಲೀಕನಿಂದ, ಇಂತಹ ಘನಘೋರ ಅಪರಾಧವಿದ್ದರು ಕ್ರಮವಹಿಸದ ಡಿಹೆಚ್ ಓ ಮೇಲಿನ ಆರೋಪ ಸತ್ಯವೇ ಎಂಬ ಅನುಮಾನಗಳ ನಡುವೆ ಕ್ರಮದ ವಿಶ್ವಾಸದಲ್ಲಿ ನೆಲಮಂಗಲದ ಜನರಿದ್ದಾರೆ.

ಆಸ್ಪತ್ರೆಯ ರೋಗಿಗಳಿಗೆ ಯಾರು ಜವಾಬ್ದಾರರು : ಅಧಿಕಾರಿಗಳಿಗೆ ನೊಂದಣಿ ಇಲ್ಲ ಎಂದು ತಿಳಿದ ಮೇಲೂ ಸಹ ಆಸ್ಪತ್ರೆಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ, ಶಸ್ತ್ರ ಚಿಕಿತ್ಸೆ ಮಾಡಲಾಗುತ್ತಿದೆ ಇದು ಹೇಗೆ ಸಾಧ್ಯ



ಇದಕ್ಕೆ ಡಿಹೆಚ್ ಓ, ಜಿಲ್ಲಾಧಿಕಾರಿಗಳು, ಆರೋಗ್ಯ ಸಚಿವ ಯು.ಟಿ ಖಾದರ್ ಉತ್ತರ ನೀಡಬೇಕಾಗಿದೆ.

**ಜಿಲ್ಲಾಧಿಕಾರಿ ಮೌನ:** ಕೇರ್ ಏಷ್ಯಾ ಆಸ್ಪತ್ರೆ ಕರ್ಮಕಾಂಡದ ಬಗ್ಗೆ ವರದಿಗಳು ಸಲ್ಲಿಕೆಯಾಗಿದೆ, ಪತ್ರಿಕಾ ಮಾಧ್ಯಮಗಳಲ್ಲಿ ವಾಸ್ತವತೆ ತಿಳಿದಿದೆ, ಆದರೆ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಅನುರಾಧ ಮಾತ್ರ ಬಹಳಷ್ಟು ಮೌನವಾಗಿದ್ದಾರೆ. ಮೌನದ ಹಿಂದೆ ಏನಾದರು ಡಿಹೆಚ್ ಓ ಮೇಲಿನ ಆರೋಪದ ಪಾಲು ಸೇರಿದೆಯಾ ಎಂಬ ಅನುಮಾನಗಳಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

## ವಕೀಲರ ಸಂಘದಿಂದ ಮಹಾದೇವ ಪ್ರಸಾದ್‌ಗೆ ಸನ್ಮಾನ

**ವಿಜಯ ದುಂಬಿ ಸುದ್ದಿ....**

**ಕುಷ್ಟಗಿ: ನೂತನವಾಗಿ ಕರ್ನಾಟಕ ವಕೀಲರ ಪರಿಷತ್ತಿಗೆ ಆಯ್ಕೆಯಾದ ಕೆ.ಎಸ್. ಮಹಾದೇವ ಪ್ರಸಾದ್ ಅವರನ್ನು ಕುಷ್ಟಗಿ ತಾಲೂಕು ವಕೀಲರ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.**

ಈ ಸಂದರ್ಭದಲ್ಲಿ ಮಾತನಾಡಿದ ವಕೀಲರು, ಕರ್ನಾಟಕ ವಕೀಲರ ಪರಿಷತ್ತಿಗೆ ಆಯ್ಕೆಯಾಗಿರುವ ಮಹಾದೇವ ಪ್ರಸಾದ್ ಅವರಿಗೆ ಅಭಿನಂದನೆ ಸಲ್ಲಿಸಿ, ಕಾನೂನು ಕ್ಷೇತ್ರದಲ್ಲಿ ಮತ್ತಷ್ಟು ಉತ್ತಮ ಸೇವೆ ಸಲ್ಲಿಸುವ ಮೂಲಕ ವಕೀಲರ ಹಿತಾಸಕ್ತಿಗೆ ಶ್ರಮಿಸಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಎಚ್.ಆರ್. ನಾಯಕ, ಬಸವರಾಜ ಬಂಡೇರ, ಎಸ್.ಜಿ. ಪಾಟೀಲ,




ಎನ್.ಆರ್. ಸೂಡಿ, ಸಿ.ಎನ್. ಉಪ್ಪಿನ, ಎಸ್.ವೈ. ಬುಕುನಟ್ಟಿ, ಎಸ್.ಎನ್. ಪಾಟೀಲ, ಎ.ಎಚ್. ಪಲ್ಲೇದ, ಎಂ.ಎಚ್. ಗೋಡಿ, ತಿಪ್ಪಣ್ಣ ಕುಂಬಾರ, ಬಿ.ಕೆ. ದಾಸರ, ಶಶಿ ಶೆಟ್ಟರ್, ಶಫಿ ಹೇರೂರ ಸೇರಿದಂತೆ ವಕೀಲರು ಉಪಸ್ಥಿತರಿದ್ದರು.

## ಶಿವಶರಣ ಕಾಯಕಯೋಗಿ ನೂಲಿಯ ಚಂದಯ್ಯ ಜಯಂತಿ ಆಚರಣೆ

**ವಿಜಯ ದುಂಬಿ ಸುದ್ದಿ....**

**ರಬಕವಿ ಬನಹಟ್ಟಿಯ: ಶಿವಶರಣ, ಕಾಯಕಯೋಗಿ ನೂಲಿಯ ಚಂದಯ್ಯ ಅವರ ಜಯಂತಿಯನ್ನು ಭಕ್ತಿಭಾವ ಹಾಗೂ ಸಂಭ್ರಮದಿಂದ ರಬಕವಿ ಬನಹಟ್ಟಿಯ ತಹಶಿಲ್ದಾರರ ಕಚೇರಿಯಲ್ಲಿ ಆಚರಿಸಲಾಯಿತು.**

ಕಾಯಕವೇ ಕೈಲಾಸ ಎಂಬ ಬಸವ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡು, ನಿಷ್ಠೆ, ಪ್ರಾಮಾಣಿಕತೆ ಮತ್ತು ಶ್ರಮದ ಮಹತ್ವವನ್ನು ಸಮಾಜಕ್ಕೆ ಸಾರಿದ ನೂಲಿಯ ಚಂದಯ್ಯ ಅವರು ಶರಣ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ತಮ್ಮ




ಕಾಯಕದ ಮೂಲಕ ಸಮಾಜಕ್ಕೆ ಮಾದರಿಯಾದ ಅವರ ಆದರ್ಶಗಳು ಇಂದಿನ ಪೀಳಿಗೆಗೂ ಪ್ರೇರಣೆಯಾಗಿವೆ. ಎಂದು ತೇರದಾಳ ಮತಕ್ಷೇತ್ರದ ಶಾಸಕರು ಸಿದ್ದು ಸವದಿ ಹೇಳಿದರು.

ಜಯಂತಿ ಅಂಗವಾಗಿ ನೂಲಿಯ ಚಂದಯ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪನಮನ ಸಲ್ಲಿಸಿದ ತಹಶಿಲ್ದಾರರ ಗೀರಿಶ ಸ್ವಾದಿ ಹಾಗೂ ಶ್ರೀ ಸಿದ್ದು ಸವದಿ ಸಂದರ್ಭದಲ್ಲಿ ಮಾತನಾಡಿದ ಗಣ್ಯರು, ಕಾಯಕಕ್ಕೆ ಗೌರವ, ದಾಸೋಹದ ಮನೋಭಾವ ಹಾಗೂ ಸಮಾನತೆಯ ಸಂದೇಶವನ್ನು ಸಾರಿದ ಶರಣರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಗಿರೀಶ ಸ್ವಾದಿ ಹೇಳಿದರು.

ಕಾರ್ಯಕ್ರಮದಲ್ಲಿ ಕಂದಾಯ ನೀರಿಕ್ಷಕರು ಪ್ರಕಾಶ ಮಠಪತಿ ರಾಜಶೇಖರ ಸಾತಿಹಾಳ ಗ್ರಾಮ ಆಡಳಿತ ಅಧಿಕಾರಿಗಳು ಸದಾಶಿವ ಕುಂಬಾರ ಈನಂದ ಕಂಪು ಸಮಾಜದ ಮುಖಂಡರು ಮಾರುತಿ ಗಾಡಿವಡ್ಡರ ಗೋಪಾಲ ಬಜಂತ್ರಿ, ಮಹಾದೇವ ಆಲಕನೂರ ಪಕೀರಪ್ಪ ಪಾತ್ರೋಟ ಯುವಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## 'ನಥಿಂಗ್ ನೈಸ್' ಅಭಿಯಾನ ಆರಂಭಿಸಿದ ಜೆಡಿಎಸ್

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು: ಬಿಎಂಐಸಿ ಯೋಜನೆ ಅನುಷ್ಠಾನದಲ್ಲಿ ನೈಸ್ ಸಂಸ್ಥೆ ನಿಯಮ ಉಲ್ಲಂಘಿಸಿರುವುದು, ಸ್ವಾಧೀನಪಡಿಸಿಕೊಂಡ ರೈತರ ಜಮೀನಿಗೆ ಪರಿಹಾರ ನೀಡದಿರುವುದು ಸೇರಿದಂತೆ ಯೋಜನೆಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸುವ ಉದ್ದೇಶದಿಂದ ಜೆಡಿಎಸ್ 'ನಥಿಂಗ್ ನೈಸ್' ಅಭಿಯಾನ ಆರಂಭಿಸಿದೆ.**

ಸುದ್ದಿಗೋಷ್ಠಿಯಲ್ಲಿ 'ನಥಿಂಗ್ ನೈಸ್' ವೆಬ್‌ಸೈಟ್‌ನ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಈ ಅಭಿಯಾನ ಜನಪರವಾಗಿದ್ದು, ಮುಂದಿನ ದಿನಗಳಲ್ಲಿ ಜನಾಂದೋಲನವಾಗಿ ರೂಪುಗೊಳ್ಳಬೇಕು ಎಂದರು. 'ನಥಿಂಗ್ ನೈಸ್' ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ Nothingnice.net ವೆಬ್‌ಸೈಟ್‌ನಲ್ಲಿರುವ ಮಾಹಿತಿಯನ್ನು ಪಡೆಯಬಹುದು. ನೈಸ್ ರಸ್ತೆಯಲ್ಲಿ ಟೋಲ್ ಏಕೆ ಪಾವತಿಸಬಾರದು ಎಂಬುದಕ್ಕೆ ಸಂಬಂಧಿಸಿದ ಮಾಹಿತಿಯನ್ನೂ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. ಈ ಕುರಿತು ಸಾರ್ವಜನಿಕರಲ್ಲಿ ಗೊಂದಲವಿದ್ದು, ಹಲವರು ಸ್ಪಷ್ಟನೆ ಕೇಳಿದ್ದರಿಂದ ವೆಬ್‌ಸೈಟ್ ಮೂಲಕ ಮಾಹಿತಿ ಒದಗಿಸಲಾಗಿದೆ ಎಂದು ಹೇಳಿದರು.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನೈಸ್ ಸಂಸ್ಥೆಯೊಂದಿಗೆ ಬಿಎಂಐಸಿ ಯೋಜನೆಗೆ ಸಂಬಂಧಿಸಿದ ಮೂಲ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಅದರಂತೆ ಬೆಂಗಳೂರು-ಮೈಸೂರು ನಡುವೆ 111 ಕಿ.ಮೀ. ಎಕ್ಸ್‌ಪ್ರೆಸ್ ಹೆದ್ದಾರಿ, 41 ಕಿ.ಮೀ. ಪೆರಿಫೆರಲ್ ರಿಂಗ್ ರಸ್ತೆ ಹಾಗೂ 9.8 ಕಿ.ಮೀ. ಲಿಂಕ್ ರಸ್ತೆ ನಿರ್ಮಿಸಬೇಕಾಗಿತ್ತು. ಆದರೆ, 26 ವರ್ಷ ಕಳೆದರೂ ಯೋಜನೆ ಪೂರ್ಣಗೊಂಡಿಲ್ಲ ಎಂದು ಆರೋಪಿಸಿದರು.




ಯೋಜನೆಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ದೊರೆತಿಲ್ಲ. ಪೆರಿಫೆರಲ್ ರಸ್ತೆಗೆ 554 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಕಾಂಕ್ರೀಟ್ ರಸ್ತೆ ನಿರ್ಮಿಸಬೇಕಿದ್ದರೂ ಡಾಂಬರ್ ರಸ್ತೆ ನಿರ್ಮಿಸಲಾಗಿದೆ. ಸದನ ಸಮಿತಿಯು ನೈಸ್ ಸಂಸ್ಥೆ 22 ಷರತ್ತುಗಳ ಪೈಕಿ 16 ಷರತ್ತುಗಳನ್ನು ಉಲ್ಲಂಘಿಸಿರುವುದಾಗಿ ತಿಳಿಸಿದೆ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.

ಹೈಕೋರ್ಟ್ ಆದೇಶದಂತೆ ಸ್ವಾಧೀನಪಡಿಸಿಕೊಂಡಿರುವ ಭೂಮಿಯನ್ನು ರೈತರಿಗೆ ವಾಪಸ್ ನೀಡಬೇಕು. ಇಲ್ಲವೇ ಭೂಮಿಗೆ ಬಡ್ಡಿ ಸಹಿತ ಪರಿಹಾರ ನೀಡಬೇಕು. ಜತೆಗೆ ಬಿಎಂಐಸಿ ಯೋಜನೆಯನ್ನು ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ಆಗ್ರಹಿಸಿದರು. ಬಿಡದಿ ಉಪನಗರ ಯೋಜನೆ, ಬಿಎಂಐಸಿ ಯೋಜನೆ ಹಾಗೂ ಪಾರ್ಕ್‌ಗಳಲ್ಲಿ ಶೇ.5ರಷ್ಟು ವಾಣಿಜ್ಯ ಬಳಕೆಗೆ ಅವಕಾಶ ಕಲ್ಪಿಸಲು ಕಾನೂನು ರೂಪಿಸುವ ಕ್ರಮಗಳನ್ನು ಉಲ್ಲೇಖಿಸಿದ ಅವರು, ರಾಜ್ಯ ಸರ್ಕಾರ ರಿಯಲ್ ಎಸ್ಟೇಟ್ ಪರವಾಗಿದೆ ಎಂದು ಆರೋಪಿಸಿದರು. ಮುಖ್ಯಮಂತ್ರಿ ರಿಯಲ್ ಎಸ್ಟೇಟ್ ವೇದಿಕೆಯ ಸಿಇಒ ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎಂದು ಟೀಕಿಸಿದರು. ಬಿಡದಿ ಉಪನಗರ ಯೋಜನೆಯನ್ನು ಜಿಬಿಐಟಿ ಹೆಸರಿನಲ್ಲಿ ರಾಜ್ಯ ಸರ್ಕಾರ ಒತ್ತಾಯಪೂರ್ವಕವಾಗಿ ಅನುಷ್ಠಾನಗೊಳಿಸಲು ಮುಂದಾಗಿದೆ. ರೈತ ವಿರೋಧಿ ಹಾಗೂ ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ನಡೆಸಿದರೆ ತಮ್ಮನ್ನು ರಾಜಕೀಯಗೊಳಿಸಲಾಗುತ್ತಿದೆ ಎಂದು ಆರೋಪಿಸಲಾಗುತ್ತಿದೆ ಎಂದರು.

## ರಬಕವಿ ಮಲ್ಲಿಕಾರ್ಜುನ ರಥಕ್ಕೆ ಪೂಜೆ ಕಾರ್ಯಕ್ರಮಕ್ಕೆ ಚಾಲನೆ

**ವಿಜಯ ದುಂಬಿ ಸುದ್ದಿ....**

ರಬಕವಿ ಬನಹಟ್ಟಿಯ: ರಬಕವಿ ನಗರದ ಆರಾಧ್ಯ ದೈವ ಮಲ್ಲಿಕಾರ್ಜುನ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ರಥದ ಪೂಜೆ ಕಾರ್ಯಕ್ರಮವನ್ನು ಶ್ರೀ ಶಂಕರಲಿಂಗ ಟ್ರಸ್ಟ್ ಕಮಿಟಿ ಮತ್ತು ಹಿರಿಯರು ಭಕ್ತಿಭಾವದಿಂದ ನೆರವೇರಿಸಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ರಥಕ್ಕೆ ಪೂಜೆ ನೆರವೇರಿಸಲಾಯಿತು. ನೂರಾರು ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀ ಮಲ್ಲಿಕಾರ್ಜುನ ದೇವರ ದರ್ಶನ ಪಡೆದು ಆಶೀರ್ವಾದ ಪಡೆದರು. ಮತ್ತು ಇದೇ ಸಂದರ್ಭದಲ್ಲಿ ಡಿಕೆ ಕೊಟ್ರಶೆಟ್ಟಿ ಫೌಂಡೇಷನ್ ವತಿಯಿಂದ ಜಾತ್ರೆಗೆ ಬಂದಂತಹ ಭಕ್ತರಿಗೆ ಮೂರು ದಿನದ ಪ್ರಸಾದ್ ನಡೆಯುತ್ತದೆ ಆದ ಕಾರಣ ಅನ್ನ ದಾಸೋಹಕ್ಕೆ ಒಂದು ಸಾವಿರ



ರೊಟ್ಟಿಯನ್ನು ಅಪಿ9ಸಿದರು. ಜಾತ್ರಾ ಮಹೋತ್ಸವವು ಯಶಸ್ವಿಯಾಗಿ ನೆರವೇರಲಿ ಹಾಗೂ ನಾಡಿನ ಜನತೆಗೆ ಸುಖ, ಶಾಂತಿ, ಸಮೃದ್ಧಿ ದೊರೆಯಲಿ ಎಂದು ಶಂಕರಲಿಂಗ ಟ್ರಸ್ಟ್ ಕಮಿಟಿ ಅವರು ಹೇಳಿದರು. ಉಪಸ್ಥಿತಿಯಲ್ಲಿ ರಬಕವಿ ನಗರದ ಹಿರಿಯರು ಯುವಕರು ತಾಯಂದಿರು ಬಾಗವಹಿಸಿದರು.

## ಭಿಕ್ಷುಕಿ ಸಾವಿತ್ರಮ್ಮನ ಮನೆಯಲ್ಲಿ ಮೂಟೆಗಟ್ಟಲೆ ಹಣ ಪತ್ತೆ ; ಸ್ಥಳದಲ್ಲೇ ಎಣಿಕೆ

**ವಿಜಯ ದುಂಬಿ ಸುದ್ದಿ....**

**ಮಂಡ್ಯ: ಶ್ರೀರಂಗಪಟ್ಟಣದ ದಿವಾನ್ ಪೂರ್ಣಯ್ಯ ಬೀದಿಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿ ವಾಸಿಸುತ್ತಿದ್ದ ಭಿಕ್ಷುಕಿ ಸಾವಿತ್ರಿ ಅವರ ಮನೆಯಲ್ಲಿ ಮೂಟೆಗಟ್ಟಲೆ ಚಿಲ್ಲರೆ ನಾಣ್ಯಗಳು ಹಾಗೂ ನೋಟುಗಳು ಪತ್ತೆಯಾಗಿದ್ದು, ಸ್ಥಳದಲ್ಲೇ ಹಣ ಎಣಿಕೆ ಕಾರ್ಯ ನಡೆಯುತ್ತಿದೆ.**

ಸುಮಾರು 40 ವರ್ಷಗಳ ಹಿಂದೆ ಸಾವಿತ್ರಿ ಅವರ ತಾಯಿ ಪಾರ್ವತಮ್ಮ ಅವರು ಶ್ರೀಮಂತ ಕುಟುಂಬದ ವ್ಯಕ್ತಿಯನ್ನು ವಿವಾಹವಾಗಿ



ಶ್ರೀರಂಗಪಟ್ಟಣಕ್ಕೆ ಬಂದಿದ್ದರು ಎನ್ನಲಾಗಿದೆ. ಕಾರಣಾಂತರಗಳಿಂದ ಕುಟುಂಬದಿಂದ ದೂರವಾದ ತಾಯಿ-ಮಗಳು ಕಳೆದ 15 ವರ್ಷಗಳಿಂದ ಇದೇ ಪ್ರದೇಶದಲ್ಲಿ ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದರು. ಕೆಲ ತಿಂಗಳ ಹಿಂದೆ ಪಾರ್ವತಮ್ಮ ಮೃತಪಟ್ಟಿದ್ದು, ಸಾವಿತ್ರಿ ಅನಾರೋಗ್ಯದಿಂದ ಬಳಲುತ್ತಿದ್ದರು.

ಸಾವಿತ್ರಿ ಅವರು ಹಲವು ದಿನಗಳಿಂದ ಮನೆಯಿಂದ ಹೊರಬಾರದಿರುವುದನ್ನು ಗಮನಿಸಿದ ಸ್ಥಳೀಯರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಸದಸ್ಯರು ಮನೆಗೆ ತೆರಳಿ ಸ್ವಚ್ಛತಾ ಕಾರ್ಯ ಆರಂಭಿಸಿದರು. ಹಳೆಯ ಬಟ್ಟೆ, ಸಾಮಾನುಗಳು ಹಾಗೂ ಕಸದ ನಡುವೆ ಸ್ಟೀಲ್ ಡಬ್ಬಗಳಲ್ಲಿ ಸಂಗ್ರಹಿಸಿಟ್ಟಿದ್ದ ನೋಟುಗಳು ಹಾಗೂ ಮೂಟೆಗಳಲ್ಲಿ ತುಂಬಿದ್ದ ಚಿಲ್ಲರೆ ನಾಣ್ಯಗಳು ಪತ್ತೆಯಾಗಿವೆ.

ಈ ಕುರಿತು ಜ್ಯೋತಿಷಿ ಭಾನುಪ್ರಕಾಶ್ ಶರ್ಮಾ ಮಾತನಾಡಿ, ಇತ್ತೀಚೆಗಷ್ಟೇ ಮಂಡ್ಯದಲ್ಲಿಯೂ ಭಿಕ್ಷುಕಿಂಒಬ್ಬರ ಮನೆಯಲ್ಲಿ ಹಣ ಪತ್ತೆಯಾಗಿತ್ತು. ಸಾವಿತ್ರಿ ಅವರ ಮನೆಯಲ್ಲಿ ಪತ್ತೆಯಾಗಿರುವ ಹಣವನ್ನು ಅವರ ಹೆಸರಿನಲ್ಲೇ ಠೇವಣಿ ಇಡುವ ಕುರಿತು ಸ್ಥಳೀಯರು ನಿರ್ಧರಿಸಿದ್ದಾರೆ ಎಂದು ತಿಳಿಸಿದ್ದಾರೆ. ಇದೇ ವೇಳೆ ಸ್ಥಳೀಯರು ಸಾವಿತ್ರಿ ಅವರನ್ನು ಸ್ವಚ್ಛಗೊಳಿಸಿ, ವೈದ್ಯಕೀಯ ತಪಾಸಣೆ ನಡೆಸಿಸುವುದರ ಜೊತೆಗೆ ಅವರ ಮನೆಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವ ಕಾರ್ಯವನ್ನೂ ಕೈಗೊಂಡಿದ್ದಾರೆ.

# ಅರಮನೆ ಪ್ರವೇಶಿಸಿದ ದಸರಾ ಆನೆಗಳು, ಪುಂಡಾಟ ನಡೆಸಿ ಆತಂಕ ಸೃಷ್ಟಿಸಿದ ಶ್ರೀರಾಮ

ವಿಜಯ ದುಂಬಿ ಸುದ್ದಿ....

**ಬೆಂಗಳೂರು: ಮೈಸೂರು ಅರಮನೆಗೆ ಪ್ರವೇಶಿಸಿದ ಗಜಪಡೆಗೆ ಅದ್ದೂರಿ ಸ್ವಾಗತ ನೀಡಿದ ಬಳಿಕ ಬಿಡಾರಕ್ಕೆ ಕರೆದೊಯ್ಯುತ್ತಿದ್ದ ವೇಳೆ 'ಶ್ರೀರಾಮ' ಆನೆ ಏಕಾಏಕಿ ದಾಂಧಲೆ ನಡೆಸಿ, ಪೊಲೀಸರು ಹಾಗೂ ಅಧಿಕಾರಿಗಳು ಕೆಲಕಾಲ ಆತಂಕಗೊಳ್ಳುವಂತೆ ಮಾಡಿದ ಘಟನೆ ನಡೆಯಿತು.**

ಮೈಸೂರು ಅರಮನೆ ಮುಂಭಾಗ ಇಂದು ಸಾಂಪ್ರದಾಯಿಕವಾಗಿ ಗಜಪಡೆಯನ್ನು ಅರಮನೆ ಆವರಣಕ್ಕೆ ಕರೆತರಲಾಯಿತು. ಬಳಿಕ ಆನೆಗಳನ್ನು ಸಾಲಾಗಿ ಬಿಡಾರಕ್ಕೆ ಕರೆದೊಯ್ಯುತ್ತಿದ್ದಾಗ, ಏಕಾಏಕಿ ಶ್ರೀರಾಮ ಆನೆ ಕೋಪಗೊಂಡು ಅತ್ತಿತ್ತ ನುಗ್ಗಿ, ಅಲ್ಲಿ ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿತು. ಇದರಿಂದ ಆತಂಕಗೊಂಡ ಪೊಲೀಸರು ಯಾವುದೇ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಿ, ಸ್ಥಳದಲ್ಲಿದ್ದ ಸಾರ್ವಜನಿಕರು ಹಾಗೂ ಸಿಬ್ಬಂದಿಯನ್ನು ದೂರ ಕಳುಹಿಸಿದರು. ಮಾವುತರು ಶ್ರೀರಾಮನನ್ನು ನಿಯಂತ್ರಿಸಲು ಸಾಕಷ್ಟು ಪ್ರಯತ್ನಪಟ್ಟರು. ಕೊನೆಗೆ ಗಜಪಡೆಯಲ್ಲಿದ್ದ ಇತರ ಆನೆಗಳ ನೆರವಿನಿಂದ ಶ್ರೀರಾಮನನ್ನು ಶಾಂತಗೊಳಿಸಲಾಯಿತು.



ಘಟನೆಯಿಂದ ಯಾವುದೇ ಅನಾಹುತ ಸಂಭವಿಸಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಶ್ರೀರಾಮ ಆನೆಯನ್ನು ಪ್ರತ್ಯೇಕವಾಗಿರಿಸಿ, ಪೌಷ್ಟಿಕಾಂಶಯುಕ್ತ ಆಹಾರ ನೀಡಿ ಆರೈಕೆ ಮಾಡಲಾಗುತ್ತಿದೆ.

ಅರಮನೆ ಪ್ರವೇಶಿಸಿದ ಗಜಪಡೆಗೆ ಅದ್ದೂರಿ ಸ್ವಾಗತ : ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಸಂಭ್ರಮ ಮತ್ತಷ್ಟು ಕಳೆಗಟ್ಟಿದೆ. ಕಳೆದ ಎರಡು ದಿನಗಳಿಂದ ಅರಣ್ಯ ಭವನದಲ್ಲಿ ವಾಸ್ತವ್ಯ ಹೂಡಿದ್ದ 9 ಗಜಪಡೆ ಇಂದು ಬೆಳಗ್ಗೆ ಬಿಗಿ ಪೊಲೀಸ್ ಭದ್ರತೆಯಲ್ಲಿ ಅರಮನೆ ಪ್ರವೇಶಿಸಿತು. ಮುಂಜಾನೆಯೇ ಮಾವುತರು ಆನೆಗಳಿಗೆ ಸ್ನಾನ ಮಾಡಿಸಿ, ಅಲಂಕರಿಸಿ ಅರಮನೆ ಪ್ರಯಾಣಕ್ಕೆ ಸಿದ್ಧಗೊಳಿಸಿದರು. ಬೆಳಗ್ಗೆ 9 ಗಂಟೆಗೆ ಅರಣ್ಯ ಭವನದಿಂದ ಗಜಪಯಣ ಆರಂಭವಾಗುತ್ತಿದ್ದಂತೆ ಇಡೀ ರಸ್ತೆಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಅರಣ್ಯ ಭವನದಿಂದ ಅರಮನೆಯ ಜಯಮಾರ್ತಾಂಡ ದ್ವಾರದವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಸಾವಿರಾರು ಸಾರ್ವಜನಿಕರು ಹಾಗೂ ಶಾಲಾ ಮಕ್ಕಳು ಸಾಲುಗಟ್ಟಿ ನಿಂತು ಗಜಪಡೆಯನ್ನು ಕಣ್ತುಂಬಿಕೊಂಡರು. ಪೊಲೀಸರು ಹಗ್ಗದ ಮೂಲಕ ಜನರನ್ನು ನಿಯಂತ್ರಿಸಿ, ಆನೆಗಳು ಸುರಕ್ಷಿತವಾಗಿ ಸಾಗಲು ಹಾದಿ ಮಾಡಿಕೊಟ್ಟರು. ಆನೆಗಳು ಹೆಜ್ಜೆ ಹಾಕುತ್ತಾ ಸಾಗುತ್ತಿದ್ದಂತೆ ಜನರು ಚಪ್ಪಾಳೆ ತಟ್ಟಿ, ಮೊಬೈಲ್‌ಗಳಲ್ಲಿ ಫೋಟೊ ಹಾಗೂ ವಿಡಿಯೊ ಸೆರೆಹಿಡಿದು ಸಂಭ್ರಮಿಸಿದರು. ಬೆಳಗ್ಗೆ 9.52ರಿಂದ 10.19ರವರೆಗೆ ನಡೆದ ಶುಭ ತುಲಾ ಲಗ್ನದಲ್ಲಿ ಅರಮನೆಯ ಜಯಮಾರ್ತಾಂಡ ದ್ವಾರದಲ್ಲಿ ಅರಮನೆ ಆಡಳಿತ ಮಂಡಳಿಯಿಂದ ಸಾಂಪ್ರದಾಯಿಕ ಪೂಜೆ ಹಾಗೂ ಪೂರ್ಣಕುಂಭ ಸ್ವಾಗತ ನೆರವೇರಿಸಲಾಯಿತು.

ಆನೆಗಳಿಗೆ ಹೂಮಾಲೆ ಹಾಕಿ, ಕಬ್ಬು, ಬೆಲ್ಲ ಹಾಗೂ ಹಣ್ಣುಗಳನ್ನು ನೀಡಿ ಬರಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ, ಅರಣ್ಯ ಸಚಿವ ರಾಮಲಿಂಗಾರೆಡ್ಡಿ, ಶಾಸಕರಾದ ಶ್ರೀವತ್ಸ, ಹ-ರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ರಘು, ಮಂಜೇಗೌಡ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಪಾಲಿಕೆ ಆಯುಕ್ತೆ ಸವಿತಾ, ಅರಮನೆ ಮಂಡಳಿಯ ಉಪನಿರ್ದೇಶಕ ಸುಬ್ರಹ್ಮಣ್ಯ ಹಾಗೂ ದಸರಾ ಕಲಾ ತಂಡದ ಸದಸ್ಯರು ಉಪಸ್ಥಿತರಿದ್ದರು.

ಅರಮನೆ ಪ್ರವೇಶಿಸಿದ 9 ಗಜಗಳು ಧನಂಜಯ (45), ಪ್ರಶಾಂತ (54), ಗೋಪಿ (43), ಶ್ರೀರಾಮ (41), ಕಾವೇರಿ (46), ಮಹೇಂದ್ರ (42), ಲಕ್ಷ್ಮೀ (54), ಏಕಲವ್ಯ (41) ಹಾಗೂ ಶ್ರೀಕಂಠ (57) ಆನೆಗಳು ಅರಮನೆ ಪ್ರವೇಶಿಸಿವೆ. ಡಿಸಿಎಫ್ ಪ್ರಭುಗೌಡ ಮಾತನಾಡಿ, ಇಂದು ಸಂಜೆ ಎಲ್ಲಾ ಆನೆಗಳ ತೂಕ ಪರೀಕ್ಷೆ ನಡೆಸಲಾಗುವುದು. ನಾಳೆಯಿಂದ ಅರಮನೆ ಆವರಣದಲ್ಲಿ ಜಂಬೂಸವಾರಿ ತಾಲೀಮು ಆರಂಭವಾಗಲಿದೆ ಎಂದು ತಿಳಿಸಿದರು.

## ರಕ್ಷಾಬಂಧನಕ್ಕೆ ಶುಭ ಕೋರಿದ ರಾಷ್ಟ್ರಪತಿ ಮುರ್ಮು, ಪ್ರಧಾನಿ ಮೋದಿ

ವಿಜಯ ದುಂಬಿ ಸುದ್ದಿ....

**ನವದೆಹಲಿ: ಸಹೋದರ–ಸಹೋದರಿಯರ ನಡುವಿನ ಪವಿತ್ರ ಪ್ರೀತಿ ಮತ್ತು ಬಾಂಧವ್ಯದ ಸಂಕೇತವಾದ ರಕ್ಷಾಬಂಧನದ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ.**





ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಶುಭಾಶಯ ಸಂದೇಶ ಹಂಚಿಕೊಂಡಿರುವ ಪ್ರಧಾನಿ ಮೋದಿ, 'ರಕ್ಷಾಬಂಧನದ ಈ ಪವಿತ್ರ ಸಂದರ್ಭದಲ್ಲಿ ಎಲ್ಲರಿಗೂ ಹೃತ್ಪೂರ್ವಕ ಶುಭಾಶಯಗಳು. ಈ ಪಾವನ ಹಬ್ಬವು ನಿಮ್ಮೆಲ್ಲರ ಜೀವನದಲ್ಲಿ ಸುಖ, ಸಮೃದ್ಧಿ ಮತ್ತು ಯಶಸ್ಸನ್ನು ತರಲಿ' ಎಂದು ಹಾರೈಸಿದ್ದಾರೆ. ಸಹೋದರ–ಸಹೋದರಿಯರ ನಡುವಿನ ವಾತ್ಸಲ್ಯ, ಪರಸ್ಪರ ನಂಬಿಕೆ ಹಾಗೂ ಪ್ರೀತಿಯ ಪವಿತ್ರ ಬಾಂಧವ್ಯ ಸದಾ ಅಚಲವಾಗಿ, ಎಂದಿಗೂ ಮುರಿಯದಂತೆ ಶಾಶ್ವತವಾಗಿ ಉಳಿಯಲಿ ಎಂದು ಅವರು ಆಶಿಸಿದ್ದಾರೆ. ಪ್ರತಿ ವರ್ಷದಂತೆ ಈ ಬಾರಿಯೂ ಪ್ರಧಾನಿ ಮೋದಿ ಅವರ ಅಧಿಕೃತ ನಿವಾಸದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿನಿಯರು ಸೇರಿದಂತೆ ಸಾರ್ವಜನಿಕರು ಪ್ರಧಾನಿಗೆ ರಾಖಿ ಕಟ್ಟಿ ರಕ್ಷಾಬಂಧನವನ್ನು ಸಂಭ್ರಮದಿಂದ ಆಚರಿಸಿದರು.ದೇಶದ ಗಡಿ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಭಾರತೀಯ ಸೇನೆ ಹಾಗೂ ಭದ್ರತಾ ಪಡೆಗಳ ಯೋಧರಿಗೂ ದೇಶಾದ್ಯಂತ ಮಹಿಳೆಯರು ಮತ್ತು ಮಕ್ಕಳು ಪ್ರೀತಿಯಿಂದ ರಾಖಿ ಕಳುಹಿಸುವ ಮೂಲಕ ರಕ್ಷಾಬಂಧನದ ಶುಭಾಶಯಗಳನ್ನು ತಿಳಿಸಿದ್ದಾರೆ. ರಕ್ಷಾಬಂಧನ ಕೇವಲ ರಾಖಿ ಕಟ್ಟುವ ಹಬ್ಬವಲ್ಲ. ಇದು ಮಹಿಳೆಯರ ಗೌರವ, ಸುರಕ್ಷತೆ ಹಾಗೂ ನಾರಿ ಶಕ್ತಿಯ ಸಬಲೀಕರಣದ ಸಂಕಲ್ಪವನ್ನು ಮತ್ತಷ್ಟು ಬಲಪಡಿಸುವ ಸಂದರ್ಭವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಗಣ್ಯರು ಶುಭ ಹಾರೈಸಿದ್ದಾರೆ.

## ಈದ್ ಮಿಲಾದ್ ಬ್ಯಾನರ್‌ಗಳ ವಿರುದ್ಧ ದೂರು: ಹಿಂದೂ ಕಾರ್ಯಕರ್ತನ ಮೇಲೆ ಎಫ್‌ಐಆರ್

ವಿಜಯ ದುಂಬಿ ಸುದ್ದಿ....

**ಕಲಬುರಗಿ: ಇತ್ತೀಚೆಗೆ ನಡೆದ ಮುಸ್ಲಿಂ ಬಾಂಧವರ ಪವಿತ್ರ ಈದ್ ಮಿಲಾದ್ ಹಬ್ಬದ ಹಿನ್ನೆಲೆಯಲ್ಲಿ ಕಲಬುರಗಿ ನಗರದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ವಿವಿಧ ರಾಜಕೀಯ ಗಣ್ಯರು ಹಾಗೂ ಉದ್ಯೋಗಿಗಳ ಹೆಸರಿನ ಬ್ಯಾನರ್‌ಗಳು ಮತ್ತು ಕಟೌಟ್‌ಗಳು ಮಹಾನಗರ ಪಾಲಿಕೆಯ ಅನುಮತಿ ಪಡೆಯದೆ ಅಳವಡಿಸಲಾಗಿತ್ತು ಎಂಬ ಆರೋಪ ಕೇಳಿಬಂದಿದೆ.**

ಈ ಕುರಿತು ಬಜರಂಗದಳದ ಕಾರ್ಯಕರ್ತ ರಾಘವೇಂದ್ರ ಗುತ್ತೇದಾರ ಅವರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಸಂಪರ್ಕಿಸಿ, ಬ್ಯಾನರ್‌ಗಳು ಹಾಗೂ ಕಟೌಟ್‌ಗಳಿಗೆ ಅನುಮತಿ ನೀಡಲಾಗಿದೆಯೇ ಎಂಬುದರ ಕುರಿತು ಮಾಹಿತಿ ಪಡೆದಿದ್ದರು. ಅಧಿಕಾರಿಗಳೊಂದಿಗೆ ನಡೆದ ದೂರವಾಣಿ ಸಂಭಾಷಣೆಯ ಆಡಿಯೋ ಹಾಗೂ ಸ್ಥಳದಲ್ಲಿನ ಅನಧಿಕೃತ ಬ್ಯಾನರ್‌ಗಳ ಕುರಿತ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ವ್ಯಾಪಕ ಚರ್ಚೆಗೆ ಕಾರಣವಾಗಿತ್ತು.



ಇದರ ಬೆನ್ನಲ್ಲೇ ಮಹಾನಗರ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಂಡು, ಅನಧಿಕೃತವಾಗಿ ಅಳವಡಿಸಿದ್ದ ಬ್ಯಾನರ್‌ಗಳು ಹಾಗೂ ಕಟೌಟ್‌ಗಳನ್ನು ತೆರವುಗೊಳಿಸಿ, ಸಂಬಂಧಪಟ್ಟವರ ವಿರುದ್ಧ ದಂಡ ವಿಧಿಸಿದ್ದಾರೆ ಎನ್ನಲಾಗಿದೆ.

ಆದರೆ ಈ ಘಟನೆ ನಡೆದ ಎರಡು ದಿನಗಳ ಬಳಿಕ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಾಘವೇಂದ್ರ ಗುತ್ತೇದಾರ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿರುವುದು ಸಾರ್ವಜನಿಕರು ಹಾಗೂ ಕಾರ್ಯಕರ್ತರ ಅಸಮಾಧಾನಕ್ಕೆ ಕಾರಣವಾಗಿದೆ. ಅಧಿಕಾರಿಗಳಿಂದ ಮಾಹಿತಿ ಪಡೆದು ಅನಧಿಕೃತ ಬ್ಯಾನರ್‌ಗಳ ಕುರಿತು ಪ್ರಶ್ನೆ ಮಾಡಿದ ವ್ಯಕ್ತಿಯ ವಿರುದ್ಧವೇ ಪ್ರಕರಣ ದಾಖಲಿಸಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಕಾರ್ಯಕರ್ತರು ಆರೋಪಿಸಿದ್ದಾರೆ.

ಸಾರ್ವಜನಿಕ ಸಮಸ್ಯೆ ಹಾಗೂ ಮಹಾನಗರ ಪಾಲಿಕೆಯ ನಿಯಮಗಳ ಅನುಷ್ಠಾನದ ಕುರಿತು ಪ್ರಶ್ನಿಸುವುದು ತಪ್ಪೇ? ಎಂದು ಅವರು ಪ್ರಶ್ನಿಸಿದ್ದಾರೆ. ಒಂದು ಸಮುದಾಯದ ಹಬ್ಬದ ಸಂದರ್ಭದಲ್ಲಿ ನಿಯಮ ಉಲ್ಲಂಘನೆಯಾಗಿದ್ದರೆ, ಅದನ್ನು ಪ್ರಶ್ನಿಸಿದ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸುವ ಬದಲು ನಿಯಮ ಉಲ್ಲಂಘಿ-ಸಿದವರ ವಿರುದ್ಧ ಸಮಾನವಾಗಿ ಕಾನೂನು ಕ್ರಮ ಕೈಗೊಳ್ಳಬೇಕು ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

ವಾಕ್ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವುದರ ಜೊತೆಗೆ, ಯಾವುದೇ ಸಮುದಾಯದ ಓಲೈಕೆಗೆ ಅವಕಾಶ ನೀಡದೆ ಕಾನೂನು ಎಲ್ಲರಿಗೂ ಸಮಾನವಾಗಿ ಅನ್ವಯವಾಗಬೇಕು. ಗೃಹಸಚಿವರ ತವರು ಜಿಲ್ಲೆಯಲ್ಲಿಯೇ ಇಂತಹ ಬೆಳವಣಿಗೆ ನಡೆಯುತ್ತಿರುವುದು ಆತಂಕಕಾರಿ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಪ್ರಕರಣದಲ್ಲಿ ನಿಜವಾದ ಕಾರಣವೇನು? ಎಫ್‌ಐಆರ್ ದಾಖಲಿಸಲು ಕಾರಣವಾದ ಅಂಶಗಳೇನು? ಹಾಗೂ ಅನಧಿಕೃತ ಬ್ಯಾನರ್‌ಗಳ ವಿರುದ್ಧ ಕೈಗೊಂಡ ಕ್ರಮದ ನಂತರವೇ ಕಾರ್ಯಕರ್ತನ ವಿರುದ್ಧ ಪ್ರಕರಣ ದಾಖಲಿಸಿರುವುದಕ್ಕೆ ಏನು ಕಾರಣ ಎಂಬುದರ ಕುರಿತು ಪೊಲೀಸರು ಹಾಗೂ ಮಹಾನಗರ ಪಾಲಿಕೆ ಅಧಿಕಾರಿಗಳು ಸ್ಪಷ್ಟನೆ ನೀಡಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ.

## ಮಧ್ಯರಾತ್ರಿ ದೇವಲಗಾಣಗಾಪುರಕ್ಕೆ ದಿಢೀರ್ ಜಿಲ್ಲಾಡಳಿತ ಭೇಟಿ

ವಿಜಯ ದುಂಬಿ ಸುದ್ದಿ....

**ಅಫಜಲಪುರ: ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ದೇವಲಗಾಣಗಾಪುರಕ್ಕೆ ಕಲಬುರಗಿ ಜಿಲ್ಲಾಧಿಕಾರಿ ಮೊಹಮ್ಮದ್ ವಿಕ್ರಂ ಶರೀಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಲು ಅಡ್ಡೂರ ಹಾಗೂ ಜಿಪಂ ಸಿಇಒ ರಾಹುಲ್ ಸಂಕನೂರ ನೇತೃತ್ವದ ಅಧಿಕಾರಿಗಳ ತಂಡ ಗುರುವಾರ ಮಧ್ಯರಾತ್ರಿ ದಿಢೀರ್ ಭೇಟಿ ನೀಡಿ ವಿವಿಧ ವ್ಯವಸ್ಥೆಗಳನ್ನು ಪರಿಶೀಲಿಸಿದರು**

ರಾತ್ರಿ ಸುಮಾರು 12.40ಕ್ಕೆ ಕ್ಷೇತ್ರಕ್ಕೆ ಆಗಮಿಸಿದ ಅಧಿಕಾರಿಗಳು ದತ್ತಾತ್ರೇಯ ದೇವಸ್ಥಾನದ ಸುತ್ತಮುತ್ತಲಿನ ಸ್ವಚ್ಛತೆ, ಭಕ್ತರ ಸಂಚಾರ ಹಾಗೂ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಬಳಿಕ ಬಸ್ ನಿಲ್ದಾಣ, ಧಾರ್ಮಿಕ ದತ್ತಿ ಇಲಾಖೆಯ ವಸತಿಗೃಹ ಹಾಗೂ





ಭೀಮಾ?ಅಮರಜಾ ಸಂಗಮಕ್ಕೂ ಭೇಟಿ ನೀಡಿ ಅಲ್ಲಿನ ಮೂಲಸೌಕರ್ಯ ಮತ್ತು ಸುರಕ್ಷತಾ ವ್ಯವಸ್ಥೆಗಳ ಬಗ್ಗೆ ಪರಿಶೀಲನೆ ನಡೆಸಿದರು. ಹೊರ ಜಿಲ್ಲೆಗಳು ಹಾಗೂ ಮಹಾರಾಷ್ಟ್ರ ಸೇ-ರಿದಂತೆ ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಕುಡಿಯುವ ನೀರು, ಸ್ವಚ್ಛತೆ, ವಾಹನ ನಿಲುಗಡೆ, ಸಂಚಾರ, ವಸತಿ ಹಾಗೂ ಭದ್ರತಾ ವ್ಯವಸ್ಥೆಗಳನ್ನು ಸಮರ್ಪಕವಾಗಿ ನಿರ್ವಹಿಸುವ ಕುರಿತು ಅಧಿಕಾರಿಗಳು ಗಮನಹರಿಸಿದರು.

ಯಾವುದೇ ಮುನ್ಸೂಚನೆಯಿಲ್ಲದೆ ಮಧ್ಯರಾತ್ರಿ ಕ್ಷೇತ್ರದ ಪ್ರಮುಖ ಸ್ಥಳಗಳಿಗೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿರುವುದು ಸಾರ್ವಜನಿಕರ ಗಮನ ಸೆಳೆಯಿತು. ಕ್ಷೇತ್ರದಲ್ಲಿ ಭಕ್ತರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಈ ಭೇಟಿ ಮಹತ್ವ ಪಡೆದಿದೆ.

# ಈಗ ಚುನಾವಣೆ ನಡೆದರೆ 326 ಸ್ಥಾನಗಳೊಂದಿಗೆ ಎನ್‌ಡಿಎಗೆ ಅಧಿಕಾರ ಗ್ಯಾರಂಟಿ : ಸಮೀಕ್ಷೆ

ವಿಜಯ ದುಂಬಿ ಸುದ್ದಿ....

**ನವದೆಹಲಿ: ದೇಶದ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿರುವ ಇಂಡಿಯಾ ಟುಡೇ–ಸಿವೋಟರ್ ಮೂಡ್ ಆಫ್ ದಿ ನೇಷನ್ ಸಮೀಕ್ಷೆ (ಎಂಒಟಿಎನ್)ಯ ವರದಿ ಹೊರಬಂದಿದ್ದು, ಪ್ರಸ್ತುತ ರಾಜಕೀಯ ಪರಿಸ್ಥಿತಿ ಹಾಗೂ ಇಂದಿನ ವಾಸ್ತವಿಕತೆಯ ಸಮಗ್ರ ಚಿತ್ರಣವನ್ನು ಇದು ನೀಡಿದೆ.**

ಎನ್‌ಡಿಎಗೆ ಮುನ್ನಡೆ: ಈಗ ಲೋಕಸಭಾ ಚುನಾವಣೆ ನಡೆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು 326 ಸ್ಥಾನಗಳನ್ನು ಗಳಿಸುವ ಮೂಲಕ ಆರಾಮದಾಯಕ ಬಹುಮತದೊಂದಿಗೆ ಅಧಿಕಾರವನ್ನು ಉಳಿಸಿಕೊಳ್ಳಲಿದೆ ಎಂದು ಸಮೀಕ್ಷೆ ಭವಿಷ್ಯ ನುಡಿದಿದೆ. ಜನವರಿಯಲ್ಲಿ ನಡೆದ ಹಿಂದಿನ ಸಮೀಕ್ಷೆಯಲ್ಲಿ ಎನ್‌ಡಿಎ 352 ಸ್ಥಾನಗಳನ್ನು ಪಡೆಯಲಿದೆ ಎಂದು ಅಂದಾಜಿಸಲಾಗಿತ್ತು. ಪ್ರಸ್ತುತ ಸಮೀಕ್ಷೆಯಲ್ಲಿ ಈ ಸಂಖ್ಯೆ 326ಕ್ಕೆ ಇಳಿದಿದ್ದು, ಆಡಳಿತಾರೂಢ ಮೈತ್ರಿಕೂಟದ ಸ್ಥಾನಗಳಲ್ಲಿ 26ರಷ್ಟು ಕುಸಿತ ಕಂಡುಬಂದಿದೆ. ಬಿಜೆಪಿ–ಕಾಂಗ್ರೆಸ್ ಸ್ಥಾನಗಳು ಪ್ರಸ್ತುತ ಸಮೀಕ್ಷೆಯ ಪ್ರಕಾರ ಬಿಜೆಪಿಗೆ ಪ್ರತ್ಯೇಕವಾಗಿ 261 ಸ್ಥಾನಗಳು ಸಿಗುವ ನಿರೀಕ್ಷೆಯಿದೆ (ಜನವರಿಯಲ್ಲಿ ಇದು 287 ಇತ್ತು).

ಮತ್ತೊಂದೆಡೆ, ಕಾಂಗ್ರೆಸ್ ಪಕ್ಷಕ್ಕೆ



ಗಮನಾರ್ಹ ಲಾಭವಾಗಿದ್ದು, ಹಿಂದಿನ ಸಮೀಕ್ಷೆಯಲ್ಲಿದ್ದ 80 ಸ್ಥಾನಗಳಿಂದ ಈ ಬಾರಿ 106 ಸ್ಥಾನಗಳಿಗೆ ಏರಿಕೆಯಾಗುವ ಸಾಧ್ಯತೆಯಿದೆ. ಇಂಡಿಯಾ ಬ್ಲಾಕ್ ಸ್ಥಿತಿ: ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟಕ್ಕೆ ಒಟ್ಟಾರೆ 185 ಸ್ಥಾನಗಳು ಸಿಗಬಹುದು ಎಂದು ಅಂದಾಜಿಸಲಾಗಿದೆ. ಇದು 2024ರ ಚುನಾವಣೆಯಲ್ಲಿ ಗಳಿಸಿದ್ದ 234 ಸ್ಥಾನಗಳಿಗೆ ಹೋಲಿಸಿದರೆ ಕಡಿಮೆ.

ಮತ ಹಂಚಿಕೆ ವಿವರ: ಎನ್‌ಡಿಎ ಮೈತ್ರಿಕೂಟದ ಮತ ಹಂಚಿಕೆಯು ಜನವರಿಯ ಶೇ. 47 ರಿಂದ ಶೇ. 45.1ಕ್ಕೆ ಕುಸಿದಿದೆ. ಅದೇ ಸಮಯದಲ್ಲಿ, ಇಂಡಿಯಾ ಮೈತ್ರಿಕೂಟದ ಮತ ಹಂಚಿಕೆಯು ಶೇ. 39.1ರಷ್ಟು ಇರಲಿದೆ ಎಂದು ಸಮೀಕ್ಷೆ ತಿಳಿಸಿದೆ. ಬದಲಾವಣೆಗಳಿಗೆ ಪ್ರಮುಖ ಕಾರಣಗಳು: ಶಿಕ್ಷಣ ವ್ಯವಸ್ಥೆಯಲ್ಲಿನ ಅಕ್ರಮಗಳು, ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ಹಾಗೂ ಯುವ ಮತದಾರರ (ಜನರೇಷನ್ ಝಡ್) ಅಸಮಾಧಾನದಂತಹ ಇತ್ತೀಚಿನ ವಿದ್ಯಮಾನಗಳು ಬಿಜೆಪಿಯ ಬೆಂಬಲದಲ್ಲಿ ಸ್ವಲ್ಪ ಮಟ್ಟಿನ ಸವೆತ ಉಂಟುಮಾಡಿದೆ. ಜುಲೈ ತಿಂಗಳಲ್ಲಿ ದೆಹಲಿಯಲ್ಲಿ ನಡೆದ ವಿದ್ಯಾರ್ಥಿಗಳ ನಿರಂತರ ಪ್ರತಿಭಟನೆ ಹಾಗೂ ಪ್ರಮುಖ ಬೆಳವಣಿಗೆಗಳು ರಾಜ-ಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದವು.

ಮತ್ತೊಂದೆಡೆ, ಮಹಿಳಾ ಮೀಸಲಾತಿ ಹಾಗೂ ವಿದ್ಯಾರ್ಥಿ ಸಮಸ್ಯೆಗಳಂತಹ ಪ್ರಮುಖ ವಿಷಯಗಳನ್ನು ಮುನ್ನೆಲೆಗೆ ತರುವ ಮೂಲಕ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ತಮ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳಲು ಯಶಸ್ವಿಯಾಗಿರುವುದು ಸಮೀಕ್ಷೆಯಿಂದ ವ್ಯಕ್ತವಾಗಿದೆ. ಜುಲೈ 1 ರಿಂದ ಆಗಸ್ಟ್ 25ರವರೆಗೆ ನೇರವಾಗಿ ಸಮೀಕ್ಷೆ ನಡೆಸಲಾದ 25,184 ಜನರ ಮಾದರಿ ಹಾಗೂ ಕಳೆದ ಆರು ತಿಂಗಳುಗಳಲ್ಲಿ ನಡೆಸಲಾದ ಒಟ್ಟು 91,795 ಸಂದರ್ಶನಗಳ ಆಧಾರದ ಮೇಲೆ ಈ ದ್ವೈವಾರ್ಷಿಕ ಸಮೀಕ್ಷೆಯನ್ನು ಸಿದ್ಧಪಡಿಸಲಾಗಿದೆ.

ಉತ್ತರಪ್ರದೇಶದಲ್ಲಿ ಬದಲಾದ ಚಿತ್ರಣ: ದೇಶದ ಅತಿ ಹೆಚ್ಚು ಲೋಕಸಭಾ ಸ್ಥಾನಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ ಸಮೀಕ್ಷೆ ಇನ್ನಷ್ಟು ಕುತೂಹಲಕಾರಿ ಚಿತ್ರಣ ನೀಡಿದೆ. ಇಲ್ಲಿ ಇಂಡಿಯಾ ಮೈತ್ರಿಕೂಟಕ್ಕೆ 41 ಸ್ಥಾನಗಳು, ಎನ್‌ಡಿಗೆ 38 ಸ್ಥಾನಗಳು ಸಿಗುವ ಸಾಧ್ಯತೆಯನ್ನು ಸಮೀಕ್ಷೆ ಸೂಚಿಸಿದೆ. ಯುವಕರ ನಿರುದ್ಯೋಗ, ಪರೀಕ್ಷಾ ಪಾರದರ್ಶಕತೆ ಮತ್ತು ಉಅಗೆ ಸಂಬಂಧಿಸಿದ ವಿಚಾರಗಳು ಮತದಾರರ ಮನಃಸ್ಥಿತಿಯ ಮೇಲೆ ಪರಿಣಾಮ ಬೀರುತ್ತಿವೆ ಎಂದು ಸಮೀಕ್ಷೆಯ ವಿಶ್ಲೇಷಣೆ ಸೂಚಿಸುತ್ತದೆ. ಆದರೆ ಇದನ್ನು ಅಂತಿಮ ಚುನಾವಣಾ ಫಲಿತಾಂಶವೆಂದು ಪರಿಗಣಿಸುವಂತಿಲ್ಲ; ರಾಜ್ಯದ ರಾಜಕೀಯ ಸಮೀಕರಣಗಳು ಮುಂದಿನ ಮೂರು ವರ್ಷಗಳಲ್ಲಿ ಹಲವು ಬಾರಿ ಬದಲಾಗುವ ಸಾಧ್ಯತೆ ಇದೆ.

ನರೇಂದ್ರಮೋದಿ ಪ್ರಭಾವ ಬಿಜೆಪಿಯ ಸ್ಥಾನಗಳಲ್ಲಿ ಕುಸಿತ ಕಂಡುಬಂದರೂ ಪ್ರಧಾನಿ ನರೇಂದ್ರ ಮೋದಿ ಅವರ ವೈಯಕ್ತಿಕ ಜನಪ್ರಿಯತೆ ಎನ್‌ಡಿಗೆ ಪ್ರಮುಖ ಬಲವಾಗಿ ಮುಂದುವ-ರಿದಿದೆ. ಇತ್ತೀಚಿನ ಎಂಒಟಿಎನ್‌ನಲ್ಲಿ ಮೋದಿ ಅವರು ಮುಂದಿನ ಪ್ರಧಾನಿಯಾಗಿ ಅತ್ಯಂತ ಆದ-ŕತೆಯ ಆಯ್ಕೆಯಾಗಿದ್ದು, ಅವರ ನಾಯಕತ್ವಕ್ಕೆ ಸಂಬಂಧಿಸಿದ ಬೆಂಬಲದಲ್ಲಿ ದೊಡ್ಡ ಕುಸಿತ ಕಂಡುಬಂದಿಲ್ಲ. ಇದು ಒಂದು ಪ್ರಮುಖ ರಾಜ-ಕೀಯ ವ್ಯತ್ಯಾಸವನ್ನು ತೋರಿಸುತ್ತದೆ:ಬಿಜೆಪಿಯ ಸ್ಥಾನಗಳು ಕುಸಿಯಬಹುದು. ಆದರೆ ಮೋದಿಯವರ ವೈಯಕ್ತಿಕ ನಾಯಕತ್ವದ ಮೇಲಿನ ಬೆಂಬಲ ಅದೇ ಪ್ರಮಾಣದಲ್ಲಿ ಕುಸಿಯಬೇಕೆಂದಿಲ್ಲ. ಇದೇ ಎನ್‌ಡಿಗೆ 326 ಸ್ಥಾನಗಳಂತಹ ಬಲಿಷ್ಠ ಅಂದಾಜಿನಲ್ಲಿ-ರಿಸುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ.

# ಕಾಳಗಿ ಪಟ್ಟಣದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತೋತ್ಸವ

**ವಿಜಯ ದುಂಬಿ ಸುದ್ದಿ....**

**ಕಾಳಗಿ : ಸರ್ಕಾರಿ ಕಚೇರಿಗಳಲ್ಲಿ ಪಟ್ಟಣ ಪಂಚಾಯತ್ ಹಾಗೂ ತಹಶೀಲ್ದಾರ್ ಕಾರ್ಯಾಲಯ ಮತ್ತು ಹಳೆ ಬಸ್ ನಿಲ್ದಾಣ ಹರ್ಷ ಜನರಲ್ ಸ್ಟೋರ್ ಎದುರುಗಡೆ 172ನೇ ಬ್ರಹ್ಮ ನಾರಾಯಣ ಗುರುಗಳ ಜಯಂತಿ ಉತ್ಸವ ವಿಜೃಂಭಣೆಯಿಂದ ಆಚರಿಸಲಾಯಿತು.**

ಮೊದಲಿಗೆ ಬ್ರಹ್ಮ ನಾರಾಯಣ ಗುರೂಜಿಗಳ ಭಾವಚಿತ್ರಕ್ಕೆ ವಿಶೇಷ ಪೂಜೆ ಪುಷ್ಪಾರ್ಚನೆ ಕಾಯಿ ಕರ್ಪೂರ ಸಲ್ಲಿಸಿದರು.

ನಂತರ ಮಾತನಾಡಿದ ರಾಘವೇಂದ್ರ ಡಿ ಗುತ್ತೇದಾರ ನಾರಾಯಣ ಗುರು ಅವರು ಕೇರಳದ ಮಹಾನ್ ಸಂತ, ತತ್ವಜ್ಞಾನಿ ಹಾಗೂ ಸಮಾಜ ಸುಧಾರಕರಾಗಿದ್ದರು. ಜಾತಿ ಅಸಮಾನತೆ, ಅಸ್ಪೃಶ್ಯತೆ ಮತ್ತು ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಡಿ, ಶಿಕ್ಷಣ, ಸಂಘಟನೆ, ಸಮಾನತೆ ಮತ್ತು




ಮಾನವೀಯತೆಯ ಮಹತ್ವವನ್ನು ಸಾರಿದರು. ಕೇರಳದ ಸಾಮಾಜಿಕ ಪುನರುಜ್ಜೀವನದಲ್ಲಿ ಅವರ ಪಾತ್ರ ಅತ್ಯಂತ ಮಹತ್ವವಾಗಿತ್ತು. ಗುರುಗಳು ಸಮಾಜದ ಅಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಸಾಧನ ಎಂದು ನಂಬಿದ್ದರು. ಶಾಲೆಗಳು, ಗ್ರಂಥಾಲಯಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಗೆ ಪ್ರೋತ್ಸಾಹ ನೀಡುತ್ತಿದ್ದರು. ಎಂದು ಹೇಳಿದರು.

ಮತ್ತು ಶಾಂತಕುಮಾರ್ ಗುತ್ತೇದಾರ ಮಾತನಾಡಿ "ಒಂದು ಜಾತಿ, ಒಂದು ಧರ್ಮ, ಒಂದು ದೇವರು ಮನುಷ್ಯನಿಗೆ." ಈ ಸಂದೇಶದ ಮೂಲಕ ಮನುಷ್ಯರೆಲ್ಲರೂ ಸಮಾನರು ಎಂಬ ವಿಚಾರವನ್ನು ಅವರು ಸಾರಿದರು. ಜಾತಿ, ಧರ್ಮ, ಭಾಷೆ ಮುಂತಾದ ಭೇದಗಳಿಗಿಂತ ಮಾನವೀಯತೆ ಮತ್ತು ಸಹೋದರತ್ವವೇ ಮುಖ್ಯ ಎಂದು ಬೋಧಿಸಿದರು. ಅವರು "ನಮಗೆ ಜಾತಿಯಿಲ್ಲ" ಎಂಬ ಘೋಷಣೆಯನ್ನೂ ನೀಡಿದರು. ಇದು ಜಾತಿ ವ್ಯವಸ್ಥೆಯ ವಿರುದ್ಧದ ಅವರ ದೃಢ ನಿಲುವನ್ನು ತೋರಿಸುತ್ತದೆ.

ಗುರುಗಳ ದೃಷ್ಟಿಯಲ್ಲಿ ಸಮಾಜದ ಉನ್ನತಿಗೆ ಶಿಕ್ಷಣ ಅತ್ಯಗತ್ಯವಾಗಿತ್ತು. ಅವರು ಜನರಿಗೆ "ಶಿಕ್ಷಣ ಪಡೆಯಿರಿ, ಸಂಘಟಿತರಾಗಿ, ಸ್ವಾವಲಂಬಿಗಳಾಗಿ" ಎಂಬ ಚಿಂತನೆಯ ದಾರಿಯನ್ನು ತೋರಿಸಿದರು. ಶಾಲೆಗಳೇ ಸಮಾಜದ ನಿಜವಾದ ಬೆಳಕಿನ ಕೇಂದ್ರಗಳಾಗಬೇಕು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದರು. ಜಾತಿ ಬೇಧವಿಲ್ಲದ ಸಮಾಜ, ಧರ್ಮದ್ವೇಷವಿಲ್ಲದ ಸಮಾಜ, ಶಿಕ್ಷಣ ಪಡೆದ ಸಮಾಜ ಮತ್ತು ಪರಸ್ಪರ ಸಹೋದರತ್ವದಿಂದ ಬದುಕುವ ಸಮಾಜ ಇದೇ ಗುರುಗಳ ಕನಸಾಗಿತ್ತು.

ಅವರ ಜೀವನ ನಮಗೆ ಒಂದು ಮಹತ್ವದ ಪಾಠ. "ಮನುಷ್ಯನನ್ನು ಮನುಷ್ಯನಾಗಿ ಕಾಣುವುದು ಮತ್ತು ಮಾನವೀಯತೆಯನ್ನು ಬೆಳೆಸುವುದು ನಿಜವಾದ ಧರ್ಮ." ಎಂದು ಸಾರಿದರು. ಈ ಸಂದರ್ಭದಲ್ಲಿ ಅನಂತಯ್ಯ ಗುತ್ತೇದಾರ ಗೌಡಯ್ಯ ಗುತ್ತೇದಾರ್ ನಿಂಗಯ್ಯ ಸುಂಠಣ ಗೌರಿಶಂಕರ್ ಗುತ್ತೇದಾರ ಗುರುರಾಜ ಮದ್ದೂರ್ ಮಂಜುನಾಥ್ ಹೆಬ್ಬಾಳ್ ದತ್ತು ಗುತ್ತೇದಾರ ಅನಿಲ್ ಗುತ್ತೇದಾರ ಯಲ್ಲಾಲಿಂಗ ಉಣ್ಣಿ ಶರಣಪ್ಪ ಬೇಲೂರು ದತ್ತು ಮದ್ದೂರ್ ಚಂದ್ರು ಗುತ್ತೇದಾರ ಪ್ರಶಾಂತ್ ಯಂಪ್ಪಲಿ ಮಹೇಶ್ ಗುತ್ತೇದಾರ ಅವಿನಾಶ್ ಗುತ್ತೇದಾರ ಈ ಸಂದರ್ಭದಲ್ಲಿ ಅನೇಕ ಉಪಸ್ಥಿತಿಯಲ್ಲಿದ್ದರು

## ಮಂತ್ರಿ ಕುರ್ಚಿ ಉಳಿಸಿಕೊಳ್ಳಲು ಬಿ.ನಾಗೇಂದ್ರ ನಾನಾ ಕಸರತ್ತು

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು: ಸಚಿವ ಸಂಪುಟದಿಂದ ಬಿ. ನಾಗೇಂದ್ರ ಅವರನ್ನು ಕೈಬಿಡುವ ಕುರಿತು ಕಾಂಗ್ರೆಸ್‌ನಲ್ಲಿ ಗಂಭೀರ ಚರ್ಚೆ ನಡೆಯುತ್ತಿದ್ದು, ಸಚಿವ ಸ್ಥಾನ ಉಳಿಸಿಕೊಳ್ಳಲು ನಾಗೇಂದ್ರ ಅವರು ದೆಹಲಿಯಲ್ಲಿ ಅಂತಿಮ ಹಂತದ ಪ್ರಯತ್ನ ನಡೆಸುತ್ತಿದ್ದಾರೆ ಎನ್ನಲಾಗಿದೆ.**

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು



ಗುರುವಾರ ದೆಹಲಿಗೆ ತೆರಳಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ಈ ವೇಳೆ ನಾಗೇಂದ್ರ ಅವರ ರಾಜೀನಾಮೆ, ಸಂಪುಟಕ್ಕೆ ಹೊಸ ಮುಖಗಳ ಸೇರ್ಪಡೆ ಸೇರಿದಂತೆ ಹಲವು ಪ್ರಮುಖ ವಿಚಾರಗಳ ಕುರಿತು ಚರ್ಚೆ ನಡೆದಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ರಾಜ್ಯ ರಾಜಕಾರಣದ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ನಿರ್ಧಾರ ಕೈಗೊಳ್ಳಲು ರಾಹುಲ್ ಗಾಂಧಿ ಅವರು ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕಾರ ನೀಡಿದ್ದಾರೆ ಎನ್ನಲಾಗಿದೆ. ಮುಂದಿನ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಪಕ್ಷಕ್ಕೆ ಹಿನ್ನಡೆಯಾಗದಂತೆ ಎಚ್ಚರಿಕೆಯ ಹೆಜ್ಜೆ ಇಡುವಂತೆ ಅವರು ಸಲಹೆ ನೀಡಿದ್ದಾರೆ ಎಂದು ತಿಳಿದುಬಂದಿದೆ. ರಾಹುಲ್ ಗಾಂಧಿ ಅವರ ಒಪ್ಪಿಗೆಯ ಬಳಿಕ ಸಂಪುಟ ಪುನಾರಚನೆ ನಡೆಯುವ ಸಾಧ್ಯತೆ ಹೆಚ್ಚಾಗಿದೆ. ನಾಗೇಂದ್ರ ಅವರಿಂದ ರಾಜೀನಾಮೆ ಪಡೆದು, ತೆರವಾಗುವ ಸ್ಥಾನಕ್ಕೆ ಅದೇ ಸಮುದಾಯದ ಮತ್ತೊಬ್ಬರಿಗೆ ಅವಕಾಶ ನೀಡುವ ಕುರಿತು ಚರ್ಚೆ ನಡೆದಿದೆ ಎನ್ನಲಾಗಿದೆ. ಅನ್ನಪೂರ್ಣ ತುಕಾರಾಂಗೆ ಅವಕಾಶ? ಸಂಡೂರು ಕ್ಷೇತ್ರದ ಶಾಸಕಿ ಅನ್ನಪೂರ್ಣ ತುಕಾರಾಂ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಮಹಿಳೆ, ಪರಿಶಿಷ್ಟ ಪಂಗಡ ಹಾಗೂ ಬಳ್ಳಾರಿ ಜಿಲ್ಲೆಗೆ ಏಕಕಾಲದಲ್ಲಿ ಪ್ರಾತಿನಿಧ್ಯ ನೀಡಿದಂತಾಗುತ್ತದೆ ಎಂಬ ಲೆಕ್ಕಾಚಾರ ಕಾಂಗ್ರೆಸ್ ವಲಯದಲ್ಲಿದೆ. ನಗರದ ಸ್ಥಳೀಯ ಮಾರ್ಗದರ್ಶಿಗಳನ್ನು ಬಳಸುವುದು ಈಗಾಗಲೇ ಖಾಲಿಯಿರುವ ಒಂದು ಸಚಿವ ಸ್ಥಾನಕ್ಕೆ ಮಹಿಳೆಯರನ್ನು ನೇಮಿಸುವ ಬಗ್ಗೆ ಚರ್ಚೆ ನಡೆದಿದ್ದು, ನಾಗೇಂದ್ರ ಅವರ ಸ್ಥಾನ ತೆರವಾದರೆ ಅದಕ್ಕೂ ಮಹಿಳೆಯರಿಗೆ ಅವಕಾಶ ಕಲ್ಪಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಮಹಿಳಾ ಕೋಟಾದಲ್ಲಿ ತೀವ್ರ ಪೈಪೋಟಿ ಮಹಿಳಾ ಕೋಟಾದಡಿ ಸಚಿವ ಸ್ಥಾನ ಪಡೆಯಲು ಆರತಿ ಕೃಷ್ಣ, ಗಾಯತ್ರಿ ಶಾಂತೇಗೌಡ, ಲಕ್ಷ್ಮೀ ಹೆಬ್ಬಾಳ್ಕರ್, ನಯನಾ ಮೋಟಮ್ಮ ಹಾಗೂ ಖನೀಜ್ ಫಾತಿಮಾ ಸೇರಿದಂತೆ ಹಲವು ನಾಯಕಿಯರ ಹೆಸರುಗಳು ಕೇಳಿಬರುತ್ತಿವೆ. ಸಂಪುಟದಲ್ಲಿ ಅವಕಾಶ ಸಿಗದಿರುವುದಕ್ಕೆ ಲಕ್ಷ್ಮೀ ಹೆಬ್ಬಾಳ್ಕರ್ ಅಸಮಾಧಾನಗೊಂಡಿದ್ದಾರೆ ಎನ್ನಲಾಗಿದೆ. ಈ ಹಿಂದೆ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾಗಿದ್ದ ಅವರು, ಅಧಿಕಾರ ಹಂಚಿಕೆ ವಿಚಾರದಲ್ಲಿ ಡಿ.ಕೆ. ಶಿವಕುಮಾರ್ ಪರವಾಗಿ ಬಹಿರಂಗವಾಗಿ ಹೇಳಿಕೆ ನೀಡಿದ್ದರು. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ 'ಮುಂದಿನ ಮುಖ್ಯಮಂತ್ರಿಗೆ ಸ್ವಾಗತ' ಎಂಬ ಪೋಸ್ಟರ್‌ಗಳನ್ನು ಲಕ್ಷ್ಮೀ ಹೆಬ್ಬಾಳ್ಕರ್ ಅವರ ಬೆಂಬಲಿಗರು ಹಾಕಿದ್ದು, ನಾಯಕತ್ವ ಬದಲಾವಣೆಯ ಚರ್ಚೆಗೆ ಮತ್ತಷ್ಟು ಬಲ ನೀಡಿತ್ತು. ನಯನಾ ಮೋಟಮ್ಮ ಕಾಂಗ್ರೆಸ್‌ನ ಮೊದಲ ಬಾರಿಗೆ ಶಾಸಕರಾಗಿರುವ ಮಹಿಳಾ ನಾಯಕಿಯಾಗಿದ್ದು, ಖನೀಜ್ ಫಾತಿಮಾ ಕಲಬುರಗಿಯನ್ನು ಪ್ರತಿನಿಧಿಸುತ್ತಿದ್ದಾರೆ. ಈಗಾಗಲೇ ಕಲಬುರಗಿ ಜಿಲ್ಲೆಗೆ ಮೂವರು ಸಚಿವ ಸ್ಥಾನಗಳು ದೊರೆತಿರುವುದರಿಂದ ನಾಲ್ಕನೇ ಸಚಿವ ಸ್ಥಾನ ನೀಡುವ ಸಾಧ್ಯತೆ ಕಡಿಮೆ ಎನ್ನಲಾಗಿದೆ. ರೂಪಕಲಾ ಅವರು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದರೂ, ಅವರ ತಂದೆ ಕೆ.ಎಚ್. ಮುನಿಯಪ್ಪ ಈಗಾಗಲೇ ಸಚಿವರಾಗಿರುವುದರಿಂದ ಒಂದೇ ಕುಟುಂಬಕ್ಕೆ ಎರಡು ಸಚಿವ ಸ್ಥಾನ ನೀಡುವ ಸಾಧ್ಯತೆ ಕಡಿಮೆ ಎಂಬ ಅಭಿಪ್ರಾಯವಿದೆ. ಬೆಳಗಾವಿ ಜಿಲ್ಲೆಯಿಂದ ಲಕ್ಷ್ಮೀ ಹೆಬ್ಬಾಳ್ಕರ್ ಬದಲಿಗೆ ಲಕ್ಷ್ಮಣ ಸವದಿ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿತ್ತು. ಈ ನಡುವೆ ವಿಧಾನಪರಿಷತ್ ಸದಸ್ಯತ್ವದ ಪ್ರಮಾಣವಚನವನ್ನೂ ಸ್ವೀಕರಿಸದ ಗಾಯತ್ರಿ ಶಾಂತೇಗೌಡ ಅವರ ಹೆಸರು ಸಚಿವ ಸ್ಥಾನದ ಸಂಭಾವ್ಯ ಪಟ್ಟಿಯಲ್ಲಿ ಕೇಳಿಬಂದಿರುವುದು ಅಚ್ಚರಿ ಮೂಡಿಸಿದೆ. ನಯನಾ ಮೋಟಮ್ಮ ಅವರೊಂದಿಗೆ ಆರತಿ ಕೃಷ್ಣ ಅವರ ಹೆಸರೂ ಪೈಪೋಟಿಯಲ್ಲಿದೆ ಎನ್ನಲಾಗಿದೆ. ವಿಧಾನಪರಿಷತ್ ಸದಸ್ಯೆ ಬಲ್ಕೀಸ್ ಬಾನು ಅವರ ಹೆಸರೂ ಚರ್ಚೆಯಲ್ಲಿದ್ದರೂ, ಮುಸ್ಲಿಂ ಸಮುದಾಯಕ್ಕೆ ಈಗಾಗಲೇ ಸಂಪುಟದಲ್ಲಿ ಮೂವರಿಗೆ ಅವಕಾಶ ನೀಡಿರುವ ಹಿನ್ನೆಲೆಯಲ್ಲಿ ಅವರನ್ನು ಪರಿಗಣಿಸುವ ಸಾಧ್ಯತೆ ಕಡಿಮೆ ಎನ್ನಲಾಗಿದೆ. ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಮತ್ತೆ ಅವಕಾಶ? ಈ ಎಲ್ಲ ಬೆಳವಣಿಗೆಗಳ ನಡುವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಸಂಪುಟಕ್ಕೆ ಸೇರಿಸುವ ಸಾಧ್ಯತೆಯ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆ ತೀವ್ರಗೊಂಡಿದೆ.ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಟ್ಟು, ಪರಿಶಿಷ್ಟ ಪಂಗಡದ ಕೋಟಾದಡಿ ಅನ್ನಪೂರ್ಣ ತುಕಾರಾಂ ಅವರಿಗೆ ಅವಕಾಶ ನೀಡುವುದರ ಜತೆಗೆ ಮಹಿಳಾ ಕೋಟಾದಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಪರಿಗಣಿಸುವ ಕುರಿತು ಡಿ.ಕೆ. ಶಿವಕುಮಾರ್ ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ. ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ದೆಹಲಿಯಲ್ಲಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ರಾಜೇಂದ್ರ ರಾಜಣ್ಣ ಅಥವಾ ಜೆ.ಎನ್. ಗಣೇಶ್ ಅವರ ಹೆಸರುಗಳನ್ನು ಸಚಿವ ಸ್ಥಾನಕ್ಕೆ ಪರಿಗಣಿಸುವಂತೆ ಒತ್ತಡ ಹೇರಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

## ವಿವಿಧತೆಯಲ್ಲಿ ಏಕತೆ ಮತ್ತು ಭಾವೈಕ್ಯತೆಯನ್ನು ಹೊಂದಿರುವ ವಿಶ್ವದ ಅನನ್ಯ ರಾಷ್ಟ್ರವಾಗಿದೆ-ಮಲ್ಲಿಕಾರ್ಜುನ ಮೇಟಿ

**ವಿಜಯ ದುಂಬಿ ಸುದ್ದಿ....**

**ಯಾದಗಿರಿ : ನಗರದ ಡಿ ದೇವರಾಜ ಅರಸ್ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಕನ್ನಡ ಮಾಧ್ಯಮ ಯಾದಗಿರಿಯಲ್ಲಿಂದು ಒಂದೇ ಜಾತಿ, ಒಂದೇ ಮತ, ಒಂದೇ (ದೇವ) ಮಾನವರಿಗೆ ಎಂಬ ಸಂದೇಶ ಸಾರಿದರು. ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧ ಧ್ವನಿ ಎತ್ತಿದರು.**

ಶಿಕ್ಷಣದ ಮೂಲಕ ಹಿಂದುಳಿದ ವರ್ಗಗಳ ಉನ್ನತಿಯಾಗಬೇಕು ಎಂದು ಪ್ರತಿಪಾದಿಸಿದರು. ಎಲ್ಲರಿಗೂ ಮುಕ್ತವಾಗಿರುವ ದೇವಾಲಯಗಳನ್ನು ಮತ್ತು ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿದರು. ಬ್ರಹ್ಮಶ್ರೀ ನಾರಾಯಣ ಗುರು ಅವರ 172ನೇ ಜಯಂತಿಯನ್ನು ಆಚರಿಸಲಾಯಿತು. ಮತ್ತು ಕಾಯಕಯೋಗಿ ಶ್ರೀ




ಶರಣ ನುಲಿಯ ಚಂದಯ್ಯನವರು 12ನೇ ಶತಮಾನದ ಶ್ರೇಷ್ಠ ವಚನಕಾರರು, ಸಂತರು ಮತ್ತು ಸಮಾಜ ಸುಧಾರಕರಾಗಿದ್ದು, ಇವರನ್ನು ಕೊರಮ ಸಮುದಾಯದ ಪ್ರಮುಖ ಆಧ್ಯಾತ್ಮಿಕ ಗುರುಗಳೆಂದು ಪೂಜಿಸಲಾಗುತ್ತದೆ. ನುಲಿಯ ಚಂದಯ್ಯ ಅವರ 919ನೇ ಜಯಂತೋತ್ಸವವನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಡಿಡಿಯು ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾದ ಮಲ್ಲಿಕಾರ್ಜುನ ಮೇಟಿ, ಕನ್ನಡ ಮಾಧ್ಯಮ ಶಾಲೆಯ ಮುಖ್ಯಸ್ಥರಾದ ವೆಂಕಟೇಶ ಪೂಜಾರಿ, ಶಿಕ್ಷಕರಾದ ಕವಿತಾ ಪಾಟೀಲ್, ಹುಚ್ಚಪ್ಪ ದೇವರಗೋನಾಲ, ಪ್ರಭು ಮೈಲಾರಿ, ನಸರೀನ್ ಬೇಗಂ, ಈರಮ್ಮ, ಮಹಮ್ಮದ್ ಸೌದಾಗರ, ಎಚ್ ಪಿ ವಂದನಾ, ನಿರ್ಮಲಾ ಬೀಳೂರ, ವಿದ್ಯಾರ್ಥಿಗಳು ಹಾಗೂ ಯಲ್ಲಮ್ಮ ಸೇರಿದಂತೆ ಇತರರು ಹಾಜರಿದ್ದರು.

## ಒಂದು ಕಡೆ ಸುರಪುರ ತಾಲೂಕು, ಇನ್ನೊಂದು ಕಡೆ ಶಹಾಪುರ ಮತಕ್ಷೇತ್ರ. ಕೆಂಭಾವಿ ರೈತರ ಗೋಳು ಕೇಳೋರು ಯಾರು

**ವಿಜಯ ದುಂಬಿ ಸುದ್ದಿ....**

**ಕೆಂಭಾವಿ: ಕೆಂಭಾವಿ ಹೋಬಳಿಯ ಗ್ರಾಮಗಳು ಬರ ಪರಿಸ್ಥಿತಿಯಿಂದ ಸಂಕಷ್ಟದಲ್ಲಿದ್ದರೂ, ಬರಪೀಡಿತ ಗ್ರಾಮಗಳ ಘೋಷಣೆ ಹಾಗೂ ಪರಿಹಾರ ವಿಚಾರದಲ್ಲಿ ಸರ್ಕಾರದಿಂದ ಸೂಕ್ತ ನ್ಯಾಯ ದೊರೆಯುತ್ತಿಲ್ಲ . ಒಂದು ಕಡೆ ಸುರಪುರ ತಾಲೂಕು, ಮತ್ತೊಂದು ಕಡೆ ಶಹಾಪುರ ಮತಕ್ಷೇತ್ರ; ಪರಿಹಾರ ಕೇಳಲು ನಾವು ಯಾರನ್ನು ಸಂಪರ್ಕಿಸಬೇಕು ಎಂದು ರೈತ ಯುವ ಮುಖಂಡ ಭಾಗೇಶ ಏವೂರ ಆಕ್ರೋಶ ವ್ಯಕ್ತಪಡಿಸಿದ್ದಾರೆ.**

ಕೆಂಭಾವಿ ಹೋಬಳಿ ಆಡಳಿತಾತ್ಮಕವಾಗಿ ಸುರಪುರ ತಾಲೂಕಿನ ವ್ಯಾಪ್ತಿಯಲ್ಲಿದ್ದು, ವಿಧಾನಸಭಾ ಕ್ಷೇತ್ರದ ದೃಷ್ಟಿಯಿಂದ ಶಹಾಪುರ ಕ್ಷೇತ್ರಕ್ಕೆ ಸೇರಿದೆ. ಈ ಆಡಳಿತಾತ್ಮಕ ಮತ್ತು ವಿಧಾನಸಭಾ ಕ್ಷೇತ್ರದ ವಿಭಜನೆಯಿಂದ ಕೆಂಭಾವಿ ಹೋಬಳಿಯ



ಜನರು ತಮ್ಮ ಸಮಸ್ಯೆಗಳನ್ನು ಯಾರ ಮುಂದೆ ಪರಿಣಾಮಕಾರಿಯಾಗಿ ಮಂಡಿಸಬೇಕು ಎಂಬ ಗೊಂದಲವನ್ನು ಎದುರಿಸುತ್ತಿದ್ದಾರೆ.

"ಒಂದು ಕಡೆ ಸುರಪುರ ತಾಲೂಕು, ಇನ್ನೊಂದು ಕಡೆ ಶಹಾಪುರ ಮತಕ್ಷೇತ್ರ. ಪ್ರತಿವರ್ಷ ಬರ ಬಂದಾಗ ನಮ್ಮ ಹಳ್ಳಿಗಳ ರೈತರು ಪರಿಹಾರಕ್ಕಾಗಿ ಯಾರನ್ನು ಕೇಳಬೇಕು? ನಮ್ಮ ಸಮಸ್ಯೆಗೆ ಜವಾಬ್ದಾರರು ಯಾರು ಪ್ರಶ್ನೆಯಾಗಿ ಕಾಡುತಿದೆ ಈಗಾಗಲೆ ಯಾದಗಿರಿ ಜಿಲ್ಲೆಯಲ್ಲಿ ಮಳೆ ಕೊರತೆ ಹಾಗೂ ಬೆಳೆ ನಷ್ಟದ ಹಿನ್ನೆಲೆಯಲ್ಲಿ ಬರಪೀಡಿತ ಪ್ರದೇಶ ಘೋಷಣೆಗಾಗಿ ಜಿಲ್ಲೆಯ ರೈತರಿಂದ ಹಾಗೂ ಕೆಂಭಾವಿ ರೈತರಿಂದ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರೆ .

ಪ್ರತಿ ವರ್ಷ ಇದೇ ರೀತಿಯ ಗೊಂದಲ ಮುಂದುವರಿದರೆ ಕೆಂಭಾವಿ ಹೋಬಳಿಯ ಜನರು ತಮ್ಮ ಸಮಸ್ಯೆಗಳಿಗೆ ಯಾರನ್ನು ಪ್ರಶ್ನಿಸಬೇಕು ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಆದ್ದರಿಂದ ರಾಜ್ಯ ಸರ್ಕಾರವು ಕೆಂಭಾವಿಯನ್ನು ಪ್ರತ್ಯೇಕ ತಾಲೂಕು ಕೇಂದ್ರವನ್ನಾಗಿ ಘೋಷಿಸಬೇಕು" ಎಂದು ಭಾಗೇಶ ಏವೂರ ಒತ್ತಾಯಿಸಿದ್ದಾರೆ. "ನಮಗೆ ಒಂದೇ ತಾಲೂಕು ಕೇಂದ್ರ ಹಾಗೂ ಒಂದೇ ವಿಧಾನಸಭಾ ಕ್ಷೇತ್ರದ ವ್ಯಾಪ್ತಿ ಇದ್ದರೆ, ನಾವು ಮತ ಹಾಕಿರುವ ಶಾಸಕರನ್ನು ನೇರವಾಗಿ ಪ್ರಶ್ನಿಸಿ ನಮ್ಮ ಸಮಸ್ಯೆಗಳಿಗೆ ಪರಿಹಾರ ಕೇಳಲು ಸಾಧ್ಯವಾಗುತ್ತದೆ.

ನಮ್ಮ ಸಮಸ್ಯೆ ಯಾರ ಹೊಣೆ ಎಂಬ ಗೊಂದಲಕ್ಕೆ ಶಾಶ್ವತ ಪರಿಹಾರ ಬೇಕಾಗಿದೆ" ಕೆಂಭಾವಿ ಹೋಬಳಿಯ ಬರಪೀಡಿತ ಅರ್ಹ ಗ್ರಾಮಗಳನ್ನು ಗುರುತಿಸಿ ರೈತರಿಗೆ ನಿಯಮಾನುಸಾರ ಪರಿಹಾರ ನೀಡುವುದರ ಜೊತೆಗೆ, ಕೆಂಭಾವಿಗೆ ತಾಲೂಕು ಸ್ಥಾನಮಾನ ನೀಡುವ ಬೇಡಿಕೆಯನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ರೈತ ಯುವ ಮುಖಂಡ ಭಾಗೇಶ ಏವೂರ ಅವರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

## ನೇಪಾಳ ಗಡಿ ಗ್ರಾಮಗಳಿಗೆ ಅಪಾಯದ ಮುನ್ಸೂಚನೆ ನೀಡಿದ ಚೀನಾ ಸರಕಾರ

**ವಿಜಯ ದುಂಬಿ ಸುದ್ದಿ....**

**ಚೀನಾ: ಚೀನಾ-ನೇಪಾಳ ಗಡಿಯಲ್ಲಿ ಮಣ್ಣು ಕುಸಿತದ ನಂತರ ರೂಪುಗೊಂಡ ಸರೋವರ ಹೊಡೆದು ಪ್ರವಾಹದ ನೀರನ್ನು ಕೆಳಕ್ಕೆ ಕಳುಹಿಸುವ ಹೆಚ್ಚಿನ ಅಪಾಯವಿದೆ ಎಂದು ಚೀನಾದ ರಾಜ್ಯ ಮಾಧ್ಯಮಗಳು ಜಲ ಅಧಿಕಾರಿಗಳ ಎಚ್ಚರಿಕೆಯನ್ನು ಕುರಿತು ವರದಿ ಮಾಡಿವೆ.**

ಮುಂದಿನ ಮೂರು ದಿನಗಳಲ್ಲಿ ನೀರಿನ ಮಟ್ಟ ಏರಿಕೆಯಾಗುವ ನಿರೀಕ್ಷೆಯಿದ್ದು, ಸೆಪ್ಟೆಂಬರ್ 1 ರ ಸುಮಾರಿಗೆ ಗರಿಷ್ಠ ಮಟ್ಟವನ್ನು ತಲುಪುವ ನಿರೀಕ್ಷೆಯಿದೆ ಎಂದು ರಾಜ್ಯ ಪ್ರಸಾರಕ ಸಿಸಿಟಿವಿ ವರದಿ ಮಾಡಿದೆ. "ಮುನ್ಸೂಚನೆಗಳ ಪ್ರಕಾರ, ನಿರಂತರ ಮಳೆಯಿಂದಾಗಿ ಮುಂದಿನ ಮೂರು ದಿನಗಳಲ್ಲಿ ಸರೋವರಕ್ಕೆ ಒಳಹರಿವು ಸುಮಾರು 3 ಮಿಲಿಯನ್ ಘನ ಮೀಟರ್‌ಗಳನ್ನು ತಲುಪಬಹುದು, ಇದು ಪ್ರವಾಹದ ನೀರನ್ನು ಕೆಳಕ್ಕೆ ಕಳುಹಿಸುವ ಮತ್ತು ಗೈರಾಂಗ್ ಬಂದರು ಮತ್ತು ಕೆಳಮುಖ ಪ್ರದೇಶಗಳಲ್ಲಿ ಮತ್ತಷ್ಟು ಹಾನಿಯನ್ನುಂಟುಮಾಡುವ ಅಪಾಯವನ್ನು ಹೆಚ್ಚಿಸುತ್ತದೆ" ಎಂದು ರಾಜ್ಯ ಸುದ್ದಿ ಸಂಸ್ಥೆ ಕ್ಸಿನ್ಹುವಾ ಗುರುವಾರ ತಡರಾತ್ರಿ ವರದಿ ಮಾಡಿದೆ. ಮುಂದಿನ ಮೂರು ದಿನಗಳಲ್ಲಿ ಈ ಪ್ರದೇಶದಲ್ಲಿ



ಮಳೆಯಾಗುವ ಮುನ್ಸೂಚನೆ ಇದೆ. ಶುಕ್ರವಾರ ಬೆಳಿಗ್ಗೆ ವೇಳೆಗೆ 499 ಸ್ಥಳೀಯ ನಿವಾಸಿಗಳು ಮತ್ತು 555 ಪ್ರವಾಸಿಗರನ್ನು ವಿಪತ್ತು ವಲಯದಿಂದ ಹೊರಗೆ ಸಾಗಿಸಲಾಗಿದೆ ಎಂದು ಸಿಸಿಟಿವಿ ತಿಳಿಸಿದೆ. ಇದು ಪ್ರವಾಸಿಗರ ರಾಷ್ಟ್ರೀಯತೆಯನ್ನು ನಿರ್ದಿಷ್ಟಪಡಿಸಿಲ್ಲ.

ವಿನಾಶಕಾರಿ ಭೂಕಂಪ ಟಿಬೆಟ್‌ನಲ್ಲಿ ಹಿಮನದಿ ಕುಸಿತವು ಭೂಕಂಪನದಂತಹ ಚಟುವಟಿಕೆ ಮತ್ತು ನದಿಯ ಕೆಳಭಾಗದ ಪ್ರದೇಶಗಳಲ್ಲಿ "ವಿನಾಶಕಾರಿ" ಪರಿಣಾಮಗಳನ್ನು ಉಂಟುಮಾಡಿದೆ ಎಂದು ಯುಎಸ್ ಜಿಯಾಲಾಜಿಕಲ್ ಸರ್ವೆ ಗುರುವಾರ ತಿಳಿಸಿದೆ. ಆರಂಭದಲ್ಲಿ ಭೂಕಂಪವೆಂದು ವರದಿಯಾದ ಆ ಚಟುವಟಿಕೆಯು ವಾಸ್ತವವಾಗಿ "ಹಿಮನದಿ ಕುಸಿತ ಮತ್ತು ಅವಶೇಷಗಳ ಹರಿವು" ಆಗಿತ್ತು ಮತ್ತು ಇದು "ನದಿಯ ಕೆಳಭಾಗದ ಪ್ರದೇಶಗಳಲ್ಲಿ ತೀವ್ರ ವಿನಾಶಕಾರಿ ಪರಿಣಾಮಗಳನ್ನು ಉಂಟುಮಾಡಿತು" ಎಂದು ಸಂಸ್ಥೆ ಹೇಳಿದೆ.

ಬುಧವಾರ ಮುಂಜಾನೆ ಸಂಭವಿಸಿದ ಈ ದುರಂತಕ್ಕೆ ನಿಖರವಾದ ಕಾರಣ ತಕ್ಷಣಕ್ಕೆ ಸ್ಪಷ್ಟವಾಗಿರಲಿಲ್ಲ. ಆದರೆ, ಭೂಕಂಪವೊಂದು ಭೂಕುಸಿತಕ್ಕೆ ಕಾರಣವಾಗಿರಬಹುದು, ಇದರಿಂದ ನದಿಯ ಹರಿವು ತಡೆಹಿಡಿಯಲ್ಪಟ್ಟು ನಂತರ ನೀರು ರಭಸವಾಗಿ ಕೆಳಭಾಗಕ್ಕೆ ನುಗ್ಗಿರಬಹುದು ಎಂದು ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಹೇಳಿದ್ದಾರೆ.

ಹಿಮನದಿ ಕರಗಿದ ನೀರನ್ನು ತಡೆಹಿಡಿದಿದ್ದ ದುರ್ಬಲವಾದ ಅವಶೇಷಗಳ ಗೋಡೆ ಕುಸಿದು ಉಂಟಾಗುವ 'ಹಿಮನದಿ ಸರೋವರದ ಪ್ರವಾಹ' ಅಥವಾ 'ಮಂಜುಗಡ್ಡೆಯ ಹಿಮಪಾತ' ಮುಂತಾದ ಇತರ ಕಾರಣಗಳನ್ನೂ ಸಹ ಊಹಿಸಲಾಗಿತ್ತು. "ಆಗಸ್ಟ್ 26 ರಂದು ಸ್ಥಳೀಯ ಸಮಯ ಬೆಳಿಗ್ಗೆ 8:37 ಕ್ಕೆ ನೇಪಾಳ ಮತ್ತು ಚೀನಾ ಗಡಿಯ ಸಮೀಪ 5.2 ತೀವ್ರತೆಯ ಭೂಕಂಪನ ಘಟನೆಯೊಂದು ಸಂಭವಿಸಿದೆ" ಎಂದು ಗಖಉಖ ತಿಳಿಸಿದೆ.

ಈ ಘಟನೆಯನ್ನು ಆರಂಭದಲ್ಲಿ 4.4 ತೀವ್ರತೆಯ ಭೂಕಂಪವೆಂದು ವರದಿ ಮಾಡಲಾಗಿತ್ತು. ಆದರೆ, ಹತ್ತಿರದ ಭೂಕಂಪನ ಮಾಪನ ಕೇಂದ್ರಗಳ ದತ್ತಾಂಶ, ದೀರ್ಘಾವಧಿಯ ಭೂಕಂಪನ ಅಲೆಗಳು ಮತ್ತು ಉಪಗ್ರಹ ಚಿತ್ರಗಳ ಹೆಚ್ಚಿನ ವಿಶ್ಲೇಷಣೆಯ ನಂತರ, ಅದು ಭೂಕಂಪವಲ್ಲ ಬದಲಾಗಿ ಹಿಮನದಿ ಕುಸಿತ ಮತ್ತು ಅವಶೇಷಗಳ ಹರಿವು ಎಂದು ನಿರ್ಧರಿಸಲಾಯಿತು."

## ನಾಪತ್ತೆಯಾಗಿದ್ದ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಸಿಐಡಿ ಕಚೇರಿಯಲ್ಲಿ ಪ್ರತ್ಯಕ್ಷ

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು: ಕೆಪಿಎಸ್‌ಸಿ ಪಶುವೈದ್ಯಾಧಿಕಾರಿಗಳ ನೇಮಕಾತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಪತ್ತೆಯಾಗಿದ್ದಾರೆಂದು ಹೇಳಲಾಗಿದ್ದ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಇಂದು ಸಿಐಡಿ ಕಚೇರಿಗೆ ವಿಚಾರಣೆಗೆ ಹಾಜರಾಗಿದ್ದಾರೆ. ಗ್ಯಾನೇಂದ್ರ ಕುಮಾರ್ ಅವರು ನಿನ್ನೆ ವಿಚಾರಣೆಗೆ ಹಾಜರಾಗಬೇಕಿತ್ತು. ಆದರೆ ಅವರು ಗೈರಾಗಿದ್ದ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ 11 ಗಂಟೆ ಸುಮಾರಿಗೆ ಸಿಐಡಿ ಕಚೇರಿಗೆ ಆಗಮಿಸಿದ್ದಾರೆ.**

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಈ ಹಿಂದೆ ಪರೀಕ್ಷಾ



ನಿಯಂತ್ರಕರಾಗಿ ಕಾರ್ಯನಿರ್ವಹಿಸಿದ್ದ ಗ್ಯಾನೇಂದ್ರ ಕುಮಾರ್ ಅವರ ಅವಧಿಯಲ್ಲೇ ಪಶುವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಈ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಸಿಐಡಿ ತನಿಖೆ ನಡೆಸುತ್ತಿದ್ದು, ಇದೀಗ ಗ್ಯಾನೇಂದ್ರ ಕುಮಾರ್ ಅವರನ್ನು ವಿಚಾರಣೆಗೆ ಒಳಪಡಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (E.r.) ಅಧಿಕಾರಿಗಳು ಕಳೆದ ವಾರ ಬೆಂಗಳೂರಿನಲ್ಲಿರುವ ಗ್ಯಾನೇಂದ್ರ ಕುಮಾರ್ ಅವರ ನಿವಾಸದ ಮೇಲೆ ದಾಳಿ ನಡೆಸಿದಾಗ ಅವರು ಮನೆಯಲ್ಲಿ ಇರಲಿಲ್ಲ. ಅವರು ಉತ್ತರ ಪ್ರದೇಶಕ್ಕೆ ತೆರಳಿದ್ದಾರೆ ಎಂಬ ಮಾಹಿತಿ ಅಧಿಕಾರಿಗಳಿಗೆ ಲಭ್ಯವಾಗಿತ್ತು.

ಬಳಿಕ ಇ.ಡಿ. ಅಧಿಕಾರಿಗಳು ಲಖನೌದಲ್ಲಿರುವ ಗ್ಯಾನೇಂದ್ರ ಕುಮಾರ್ ಅವರ ನಿವಾಸದ ಮೇಲೂ ದಾಳಿ ನಡೆಸಿದ್ದರು. ಆದರೆ ಅಲ್ಲಿಯೂ ಅವರು ಪತ್ತೆಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಗ್ಯಾನೇಂದ್ರ ಕುಮಾರ್ ಅವರ ಪತ್ತೆ ಕುರಿತು ಹಲವು ಪ್ರಶ್ನೆಗಳು ಮೂಡಿದ್ದವು. ಇದೀಗ ಅವರು ದಿಢೀರ್ ಸಿಐಡಿ ಕಚೇರಿಗೆ ವಿಚಾರಣೆಗೆ ಹಾಜರಾಗಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು ವಿಚಾರಣೆಗೆ ಹಾಜರಾಗುವಂತೆ ಗ್ಯಾನೇಂದ್ರ ಕುಮಾರ್ ಅವರಿಗೆ ನೋಟಿಸ್ ನೀಡಿದ್ದರು. ಈ ಹಿನ್ನೆಲೆಯಲ್ಲಿ ಅವರು ಇಂದು ವಿಚಾರಣೆಗೆ ಹಾಜರಾಗಿದ್ದು, ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಹತ್ವದ ಮಾಹಿತಿಗಳನ್ನು ಅಧಿಕಾರಿಗಳು ಕಲೆಹಾಕುವ ಸಾಧ್ಯತೆಯಿದೆ.

# ಆರ್‌ಡಿಪಿಆರ್ ನೇಮಕಾತಿ ಅಕ್ರಮ ಬಯಲು : ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಹೆಚ್ಚಿದ ಆಗ್ರಹ

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು: ಕೇಂದ್ರ ರೈಲ್ವೆ ಇಲಾಖೆ ಘೋಷಿಸಿರುವ ಹೊಸ ಯೋಜನೆಗಳಲ್ಲಿ ಕರ್ನಾಟಕಕ್ಕೆ ಸೂಕ್ತ ಆದ್ಯತೆ ನೀಡದೆ ಮಲತಾಯಿ ಧೋರಣೆ ಅನುಸರಿಸಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಆರೋಪಿಸಿದ್ದಾರೆ.**



ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಏಳು ರೈಲ್ವೆ ಮಾರ್ಗಗಳ ಯೋಜನೆಗಳನ್ನು ಘೋಷಿಸಿದ್ದು, ಇದರಲ್ಲಿ ನಾಲ್ಕು ಹೊಸ ಚತುಷ್ಪಥ ರೈಲು ಮಾರ್ಗಗಳೂ ಸೇರಿವೆ. ದೆಹಲಿ, ಮುಂಬೈ, ಚೆನ್ನೈ ಹಾಗೂ ಗೋವಾ ಸೇರಿದಂತೆ ವಿವಿಧ ನಗರಗಳನ್ನು ಸಂಪರ್ಕಿಸುವ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ. ಆದರೆ, ಈ ಯೋಜನೆಗಳಲ್ಲಿ ಕರ್ನಾಟಕಕ್ಕೆ ಸೂಕ್ತ ಪ್ರಾತಿನಿಧ್ಯ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ಪ್ರಮುಖ ರೈಲ್ವೆ ಮಾರ್ಗವೊಂದು ಹಾದುಹೋಗದ ರೀತಿಯಲ್ಲಿ ಯೋಜನೆ ರೂಪಿಸಿರುವುದು ಸರಿಯಲ್ಲ. ರಾಜ್ಯಕ್ಕೆ ನಿರಂತರವಾಗಿ ಮಲತಾಯಿ ಧೋರಣೆ ತೋರುತ್ತಿರುವುದು ಅನ್ಯಾಯ ಎಂದು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕದಿಂದ 10ಕ್ಕೂ ಹೆಚ್ಚು ಬಿಜೆಪಿ ಸಂಸದರು ಹಾಗೂ ರೈಲ್ವೆ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ಅವರಿದ್ದರೂ ರಾಜ್ಯದ ರೈಲ್ವೆ ಯೋಜನೆಗಳಿಗೆ ನಿರೀಕ್ಷಿತ ಆದ್ಯತೆ ದೊರೆಯುತ್ತಿಲ್ಲ. ಈ ಸಮಸ್ಯೆಯನ್ನು ರಾಜ್ಯದ ರೈಲ್ವೆ ಸಚಿವರು ಹೇಗೆ ಬಗೆಹರಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ ಎಂದರು.

ಬೆಂಗಳೂರು–ಹುಬ್ಬಳ್ಳಿ, ಬೆಂಗಳೂರು–ತುಮಕೂರು, ಬೆಂಗಳೂರು–ಕಲಬುರಗಿ ಹಾಗೂ ಬೆಂಗಳೂರು–ಮಂಗಳೂರು ಸೇರಿದಂತೆ ಹಲವು ಪ್ರಮುಖ ರೈಲ್ವೆ ಮಾರ್ಗಗಳ ಕುರಿತು ರಾಜ್ಯ ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದರೂ ಕೇಂದ್ರದಿಂದ ಅಗತ್ಯ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು. ಮಂಗಳೂರು ರೈಲ್ವೆ ವ್ಯಾಪ್ತಿಯ ವಿಚಾರದಲ್ಲೂ ಹಲವು ಸಮಸ್ಯೆಗಳಿವೆ. ಸುಮಾರು 330 ಕಿ.ಮೀ. ಉದ್ದದ ಕರಾವಳಿ ಪ್ರದೇಶ ಹೊಂದಿರುವ ಕರ್ನಾಟಕದಲ್ಲಿ ಸರಕು ಸಾಗಣೆ ಹಾಗೂ ಪ್ರಯಾಣಿಕರ ಸಂಚಾರ ಸುಗಮವಾಗಲು ರೈಲ್ವೆ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಹೇಳಿದರು.

ಬೆಂಗಳೂರು–ಮಂಗಳೂರು ಜೋಡಿ ರೈಲು ಮಾರ್ಗ, ಹುಬ್ಬಳ್ಳಿ–ಅಂಕೋಲಾ ಜೋಡಿ ಮಾರ್ಗ, ಬೆಂಗಳೂರು–ವಿಜಯಪುರ ಹಾಗೂ ಬೆಂಗಳೂರು–ಚೆನ್ನೈ ಸಂಪರ್ಕ ಸೇರಿದಂತೆ ಹಲವು ಯೋಜನೆಗಳಿಗೆ ಆದ್ಯತೆ ನೀಡಬೇಕು. ಜೋಡಿ ಹಾಗೂ ಚತುಷ್ಪಥ ರೈಲು ಮಾರ್ಗಗಳಿಂದ ಪ್ರಯಾಣಿಕರ ಜತೆಗೆ ಕೈಗಾರಿಕೆಗಳು ಮತ್ತು ಸರಕು ಸಾಗಣೆಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಬೆಂಗಳೂರು ದೇಶದ ಪ್ರಮುಖ ಮಾಹಿತಿ ತಂತ್ರಜ್ಞಾನ, ಸಂಶೋಧನೆ ಹಾಗೂ ನವೋದ್ಯಮ ಕೇಂದ್ರವಾಗಿ ಬೆಳೆಯುತ್ತಿದೆ. ಹೀಗಾಗಿ ರಾಜ್ಯದ ರೈಲ್ವೆ ಮೂಲಸೌಕರ್ಯವನ್ನು ಬಲಪಡಿಸುವುದು ಅತ್ಯಗತ್ಯ. ದಾವಣಗೆರೆ–ತುಮಕೂರು ರೈಲು ಮಾರ್ಗವನ್ನೂ ಜೋಡಿ ಮಾರ್ಗವಾಗಿ ಅಭಿವೃದ್ಧಿಪಡಿಸಿದರೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ಹೇಳಿದರು. ಕರ್ನಾಟಕಕ್ಕೂ ಹೈಸ್ಪೀಡ್ ರೈಲು ಯೋಜನೆ ಅಗತ್ಯವಿದೆ. ಮುಂಬೈ–ಪುಣೆ ಹಾಗೂ ಹೈದರಾಬಾದ್ ಕಡೆಗೆ ಹೈಸ್ಪೀಡ್ ರೈಲು ಯೋಜನೆಗಳ ಕುರಿತು ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಮುಂಬೈ–ಬೆಂಗಳೂರು ಹೈಸ್ಪೀಡ್ ರೈಲು ಸಂಪರ್ಕಕ್ಕೂ ಆದ್ಯತೆ ನೀಡಬೇಕು. ಈ ಕುರಿತು ರಾಜ್ಯ ಸರ್ಕಾರ ಈಗಾಗಲೇ ಕೇಂದ್ರಕ್ಕೆ ಮನವಿ ಮಾಡಿದೆ ಎಂದರು.

ಬೆಂಗಳೂರು–ಹುಬ್ಬಳ್ಳಿ–ಪುಣೆ ಮಾರ್ಗದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದೆ. ರಾಷ್ಟ್ರೀಯ ಹೆದ್ದಾರಿಗಳ ಮೇಲೂ ಒತ್ತಡ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಚತುಷ್ಪಥ ರೈಲು ಮಾರ್ಗಗಳನ್ನು ನಿರ್ಮಿಸಿದರೆ ರಸ್ತೆ ಜಾಲದ ಮೇಲಿನ ಒತ್ತಡ ಕಡಿಮೆಯಾಗಲಿದೆ ಎಂದು ಅಭಿಪ್ರಾಯಪಟ್ಟರು. ರೈಲ್ವೆ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು 50:50 ಅನುಪಾತದಲ್ಲಿ ಸಹಭಾಗಿತ್ವ ವಹಿಸುತ್ತಿವೆ. ಕರ್ನಾಟಕದ ರೈಲ್ವೆ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಇನ್ನಷ್ಟು ಸಹಕಾರ ನೀಡಬೇಕು ಎಂದು ಒತ್ತಾಯಿಸಿದರು.

ಈ ಕುರಿತು ರೈಲ್ವೆ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ಅವರೊಂದಿಗೆ ಚರ್ಚಿಸುವುದಾಗಿ ತಿಳಿಸಿದ ಪಾಟೀಲ್, ಮುಖ್ಯಮಂತ್ರಿ ಅವರಿಂದಲೂ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಸುವಂತೆ ಮನವಿ ಮಾಡುವುದಾಗಿ ಹೇಳಿದರು. 'ರಾಜ್ಯಕ್ಕೆ ಸೂಕ್ತ ನ್ಯಾಯ ಸಿಗಬೇಕು. ಈ ವಿಚಾರದಲ್ಲಿ ನಾವು ರಾಜಕೀಯ ಮಾಡುವುದಿಲ್ಲ' ಎಂದರು.

ಕೆಪಿಎಸ್‌ಸಿ ವಿಚಾರದಲ್ಲೂ ಕುಮಾರಸ್ವಾಮಿಗೆ ತಿರುಗೇಟು ಉಪ ಮುಖ್ಯಮಂತ್ರಿ ಹುದ್ದೆ ಕುರಿತು ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಕೈಗೊಂಡಿದೆ. ಹೆಚ್ಚು ಹುದ್ದೆಗಳಿದ್ದರೆ ಗೊಂದಲ ಉಂಟಾಗಬಹುದು ಎಂಬ ಕಾರಣಕ್ಕೆ ಒಂದೇ ಉಪ ಮುಖ್ಯಮಂತ್ರಿ ಹುದ್ದೆ ಉಳಿಸಿಕೊಂಡಿರಬಹುದು. ಪರಮೇಶ್ವರ್ ಹಿರಿಯ ನಾಯಕರಾಗಿದ್ದು, ಅವರಿಗೆ ಅವಕಾಶ ಸಿಕ್ಕಿರುವುದು ವೈಯಕ್ತಿಕವಾಗಿ ಸಂತೋಷ ತಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದೆ ತಮ್ಮೊಂದಿಗೆ ಚರ್ಚಿಸುವಾಗ ಒಂದೇ ಉಪ ಮುಖ್ಯಮಂತ್ರಿ ಹುದ್ದೆಯ ಬಗ್ಗೆ ಸೂಚನೆ ನೀಡಿದ್ದರು ಎಂದು ಪಾಟೀಲ್ ಹೇಳಿದರು.

ತಾವು ಅಧಿಕಾರಕ್ಕೆ ಬಂದರೆ ಕೆಪಿಎಸ್‌ಸಿಯನ್ನು ಸ್ವಚ್ಛಗೊಳಿಸುವುದಾಗಿ ಎಚ್.ಡಿ. ಕುಮಾರಸ್ವಾಮಿ ಹೇಳುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಈ ಹಿಂದೆ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ ಕೆಪಿಎಸ್‌ಸಿಯನ್ನು ಏಕೆ ಸ್ವಚ್ಛಗೊಳಿಸಲಿಲ್ಲ?' ಎಂದು ಪ್ರಶ್ನಿಸಿದರು. ಕೆಪಿಎಸ್‌ಸಿಗೆ ಅಧ್ಯಕ್ಷರನ್ನು ನೇಮಿಸಿದ್ದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ. ನೈಸ್ ಯೋಜನೆ ಹಾಗೂ ಬಿಡದಿ ಉಪನಗರ ಯೋಜನೆಗಳ ಸೃಷ್ಟಿಕರ್ತರು ಕುಮಾರಸ್ವಾಮಿ ಹಾಗೂ ಅವರ ಪಕ್ಷವೇ. ಅವರೇ ನಿರ್ಧಾರಗಳನ್ನು ಕೈಗೊಂಡು ಇದೀಗ ಬೇರೆಯವರ ಮೇಲೆ ಹೊಣೆ ಹೊರಿಸುತ್ತಿದ್ದಾರೆ ಎಂದು ಪಾಟೀಲ್ ಟೀಕಿಸಿದರು.

# ಭಯೋತ್ಪಾದನೆ ನಿಗ್ರಹಕ್ಕೆ ರಾಜ್ಯ ಪೊಲೀಸರಿಗೆ ಎನ್‌ಎಸ್‌ಜಿ ವಿಶೇಷ ತರಬೇತಿ

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು: ಭಯೋತ್ಪಾದಕ ಕೃತ್ಯಗಳನ್ನು ನಿಗ್ರಹಿಸುವುದು ಹಾಗೂ ತುರ್ತು ಸಂದರ್ಭಗಳಲ್ಲಿ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯ ಹೆಚ್ಚಿಸಲು ರಾಜ್ಯ ಪೊಲೀಸ್ ಪಡೆಗೆ ರಾಷ್ಟ್ರೀಯ ಭದ್ರತಾ ಪಡೆ (ಎನ್‌ಎಸ್‌ಜಿ) ಒಂದು ತಿಂಗಳ ವಿಶೇಷ ತರಬೇತಿ ನೀಡಲಿದೆ.ನಗರದ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು.**





ರಾಷ್ಟ್ರೀಯ ಭದ್ರತೆ, ಸಾರ್ವಜನಿಕ ಸುವ್ಯವಸ್ಥೆ ಹಾಗೂ ಸಾಮಾಜಿಕ ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಭಯೋತ್ಪಾದನೆ ವಿರುದ್ಧದ ಹೋರಾಟ ಅತ್ಯಂತ ಮಹತ್ವದ್ದಾಗಿದೆ. ಭಯೋತ್ಪಾದಕ ಕೃತ್ಯಗಳು ಸಂಭವಿಸಿದ ಸಂದರ್ಭದಲ್ಲಿ ಸಾವು–ನೋವು ತಡೆಯುವುದು ಹಾಗೂ ಪರಿಸ್ಥಿತಿ ವಿಕೋಪಕ್ಕೆ ತಿರುಗದಂತೆ ನಿಯಂತ್ರಿಸುವಲ್ಲಿ ಪೊಲೀಸರು ಸದಾ ಸನ್ನದ್ಧರಾಗಿರುವುದು ನಿರ್ಣಾಯಕ ಎಂದು ಕಾರ್ಯಕ್ರಮದಲ್ಲಿ ತಿಳಿಸಲಾಯಿತು.

ತರಬೇತಿ ಅವಧಿಯಲ್ಲಿ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆ, ಡ್ರೋನ್ ವಿರೋಧಿ ಕಾರ್ಯಾಚರಣೆ, ನಿರಾಯುಧ ಸಮರ ಕಲೆ, ಸ್ನೈಪರ್ ತರಬೇತಿ, ಸ್ಫೋಟಕ ಸಾಧನಗಳ ವಿರುದ್ಧ ಕಾರ್ಯಾಚರಣೆ, ಬಾಂಬ್ ನಿಷ್ಕ್ರಿಯಗೊಳಿಸುವಿಕೆ ಸೇರಿದಂತೆ ವಿವಿಧ ವಿಶೇಷ ಕಾರ್ಯಾಚರಣಾ ಕ್ಷೇತ್ರಗಳಲ್ಲಿ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತದೆ.

ರಾಜ್ಯದ ವಿವಿಧ ಕಾರ್ಯಾಚರಣಾ ಹಾಗೂ ಸಹಾಯಕ ಘಟಕಗಳಿಂದ ಆಯ್ಕೆ ಮಾಡಲಾದ ಸಿಬ್ಬಂದಿಗೆ ವ್ಯವಸ್ಥಿತ ತರಬೇತಿ ನೀಡುವ ಮೂಲಕ ಕರ್ನಾಟಕ ಪೊಲೀಸರ ವಿಶೇಷ ಕಾರ್ಯಾಚರಣಾ ಸಾಮರ್ಥ್ಯವನ್ನು ಹೆಚ್ಚಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಒಂದು ತಿಂಗಳ ಅವಧಿಯಲ್ಲಿ ಕರ್ನಾಟಕ ಪೊಲೀಸ್ ಪಡೆಯ ಸುಮಾರು 500 ಸಿಬ್ಬಂದಿಗೆ ವಿವಿಧ ವಿಶೇಷ ಕಾರ್ಯಾಚರಣಾ ಕ್ಷೇತ್ರಗಳಲ್ಲಿ ತರಬೇತಿ ನೀಡಲಾಗುತ್ತದೆ. ಎನ್‌ಎಸ್‌ಜಿ ವತಿಯಿಂದ ಆಯೋಜಿಸಿರುವ ಈ ವಿಶೇಷ ತರಬೇತಿ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ಪಡೆಯ ಸಾಮರ್ಥ್ಯವರ್ಧನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶ್ಲಾಘಿಸಿ, ಎನ್‌ಎಸ್‌ಜಿಗೆ ಕೃತಜ್ಞತೆ ಸಲ್ಲಿಸಿದರು.

## ಆಪರೇಷನ್ ಸಿಂಧೂರ್ ವೇಳೆ ಭಾರತದ ಎಸ್–400 ನಿಯೋಜನೆ ಸ್ಥಳ ತಿಳಿಯದೆ ಪರದಾಡಿದ್ದ ಪಾಕ್

**ವಿಜಯ ದುಂಬಿ ಸುದ್ದಿ....**

**ನವದೆಹಲಿ: ಭಾರತದಲ್ಲಿ ಎಸ್–400 ವಾಯು ರಕ್ಷಣಾ ವ್ಯವಸ್ಥೆಗಳನ್ನು ಎಲ್ಲಿ ನಿಯೋಜಿಸಲಾಗಿದೆ ಎಂಬ ಮಾಹಿತಿ ತಿಳಿದುಕೊಳ್ಳಲು ಪಾಕಿಸ್ತಾನ ಹರಸಾಹಸ ನಡೆಸಿತ್ತು ಎಂದು ಏರ್ ಮಾರ್ಷಲ್ ಜೀತೇಂದ್ರ ಮಿಶ್ರಾ ಹೇಳಿದ್ದಾರೆ.**



ಪಹಲ್ಗಾಮ್ ಉಗ್ರರ ದಾಳಿಗೆ ಪ್ರತಿಯಾಗಿ ಭಾರತ ಕೈಗೊಂಡಿದ್ದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ವೇಳೆ ರಷ್ಯಾ ನಿರ್ಮಿತ ಎಸ್–400 ವಾಯು ರಕ್ಷಣಾ ವ್ಯವಸ್ಥೆಯ ಪರಿಣಾಮಕಾರಿತ್ವದಿಂದಾಗಿ ಪಾಕಿಸ್ತಾನದ ಯುದ್ಧವಿಮಾನಗಳು ಭಾರತೀಯ ಗಡಿಯ 200 ಕಿ.ಮೀ. ವ್ಯಾಪ್ತಿಯೊಳಗೆ ಪ್ರವೇಶಿಸಲು ಸಾಧ್ಯವಾಗಲಿಲ್ಲ ಎಂದು ಅವರು ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. ಭಾರತದಲ್ಲಿ ಎಸ್–400 ವ್ಯವಸ್ಥೆಗಳನ್ನು ಎಲ್ಲಿ ನಿಯೋಜಿಸಲಾಗಿದೆ ಎಂಬುದನ್ನು ಪತ್ತೆಹಚ್ಚಲು ಪಾಕಿಸ್ತಾನ ತನ್ನಲ್ಲಿದ್ದ ಎಲ್ಲ ತಂತ್ರಗಳನ್ನು ಬಳಸಿತ್ತು. ಇದಕ್ಕಾಗಿ ಭಾರತದಲ್ಲಿದ್ದ ತನ್ನ ಗೂಢಚಾರರು ಹಾಗೂ ಸ್ಲೀಪರ್ ಸೆಲ್‌ಗಳನ್ನು ಸಕ್ರಿಯಗೊಳಿಸಿತ್ತು ಎಂದು ಜೀತೇಂದ್ರ ಮಿಶ್ರಾ ಹೇಳಿದ್ದಾರೆ. ಎಸ್–400 ನಿಯೋಜನೆ ಸ್ಥಳಗಳನ್ನು ಪತ್ತೆಹಚ್ಚಲು ಪಾಕಿಸ್ತಾನ ಹಲವು ಮಾರ್ಗಗಳನ್ನು ಅನುಸರಿಸಿತ್ತು. ಇತರ ದೇಶಗಳಿಂದಲೂ ಉಪಗ್ರಹ ಆಧಾರಿತ ಗುಪ್ತಚರ ಮಾಹಿತಿಯನ್ನು ಪಡೆಯುತ್ತಿತ್ತು. ಪಾಕಿಸ್ತಾನದ ಯುದ್ಧವಿಮಾನಗಳು ಭಾರತೀಯ ಗಡಿಯತ್ತ ಬಂದಾಗಲೆಲ್ಲ ಎಸ್–400 ಅವುಗಳನ್ನು ತಡೆಯುವಲ್ಲಿ ಯಶಸ್ವಿಯಾಗಿತ್ತು. ಹೀಗಾಗಿ, ಪಾಕಿಸ್ತಾನ ತನ್ನ ಸ್ಲೀಪರ್ ಸೆಲ್‌ಗಳನ್ನು ಸಕ್ರಿಯಗೊಳಿಸಿತ್ತು ಎಂದು ಅವರು ತಿಳಿಸಿದ್ದಾರೆ. ಚೀನಾ ಪಾಕಿಸ್ತಾನಕ್ಕೆ ಭಾರತದ ಪ್ರಮುಖ ಸೇನಾ ನೆಲೆಗಳ ಕುರಿತು ಮಾಹಿತಿ ನೀಡುತ್ತಿತ್ತು ಎಂಬ ವರದಿಗಳೂ ಇವೆ ಎಂದು ಅವರು ಹೇಳಿದ್ದಾರೆ.ಪಾಕಿಸ್ತಾನದ ರೇಡಾರ್ ವಿಮಾನವನ್ನು ಹೊಡೆದುರುಳಿಸಿದ ಘಟನೆಯನ್ನು ನೆನಪಿಸಿಕೊಂಡ ಜೀತೇಂದ್ರ ಮಿಶ್ರಾ, ಎಸ್–400 ಆಪರೇಟರ್ ದಾಳಿ ನಡೆಸಬೇಕೇ ಎಂದು ನನ್ನನ್ನು ಕೇಳಿದರು. ನಾನು ದಾಳಿ ನಡೆಸುವಂತೆ ಆದೇಶಿಸಿದೆ. ಸುಮಾರು 314 ಕಿ.ಮೀ. ದೂರದಲ್ಲಿದ್ದ ಪಾಕಿಸ್ತಾನದ ವಿಮಾನವನ್ನು ಹೊಡೆದುರುಳಿಸಲಾಯಿತು ಎಂದು ತಿಳಿಸಿದ್ದಾರೆ. ನೆಲದಿಂದ ಆಗಸಕ್ಕೆ ಉಡಾಯಿಸುವ ಕ್ಷಿಪಣಿಯ ಮೂಲಕ ನಡೆದ ವಿಶ್ವದ ಅತ್ಯಂತ ದೂರದ ಯಶಸ್ವಿ ದಾಳಿಗಳಲ್ಲಿ ಇದೂ ಒಂದಾಗಿದೆ ಎಂದು ಅವರು ಬಣ್ಣಿಸಿದ್ದಾರೆ.

# ಕೆಪಿಎಸ್‌ಸಿ ಅಧ್ಯಕ್ಷರ ನೇಮಕಾತಿ ಬಗ್ಗೆ ಮಾತಾಡೋ ಧೈರ್ಯ ಇಲ್ಲವೇ..? : ಎಚ್‌ಡಿಕೆಗೆ ಪ್ರಿಯಾಂಕ್ ಸವಾಲು

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು: ಕೆಪಿಎಸ್‌ಸಿ ನೇಮಕಾತಿ ಅಕ್ರಮಗಳ ಕುರಿತು ಮಾತನಾಡುತ್ತಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕೆಪಿಎಸ್‌ಸಿ ಅಧ್ಯಕ್ಷರ ನೇಮಕಾತಿಯ ಬಗ್ಗೆಯೂ ಮಾತನಾಡುವ ಧೈರ್ಯ ತೋರಿಸಲಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.**



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಎಸ್‌ಸಿ ನೇಮಕಾತಿಯಲ್ಲಿ ಅಕ್ರಮದ ಬಗ್ಗೆ ಮಾತನಾಡುವ ಕುಮಾರಸ್ವಾಮಿ ಅವರು ಶಿವಶಂಕರಪ್ಪ ಹಾಗೂ ಸಾಹುಕಾರ್ ಅವರನ್ನು ಕೆಪಿಎಸ್‌ಸಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದು ಯಾರು ಎಂಬುದನ್ನೂ ಹೇಳಬೇಕು ಎಂದು ಆಗ್ರಹಿಸಿದರು. 'ಅವರ ಮನೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅಥವಾ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಫೋಟೊ ಇಲ್ಲ. ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ಫೋಟೊ ಇದೆ ಎಂದು ಹೇಳಲಾಗುತ್ತಿದೆ. ?200 ಕೋಟಿ ನೀಡಿ ಕೆಪಿಎಸ್‌ಸಿಗೆ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು ಎಂದು ಬಿಜೆಪಿ ಮಾಜಿ ಶಾಸಕರೇ ಆರೋಪಿಸಿದ್ದಾರೆ. ಇದು ನಿಜವೇ? ಇದರ ಬಗ್ಗೆ ಮಾತನಾಡಲು ಕುಮಾರಸ್ವಾಮಿ ಅವರಿಗೆ ಧೈರ್ಯವಿದೆಂ ಮೇ?' ಎಂದು ಪ್ರಶ್ನಿಸಿದರು.

ತಮ್ಮ ಮಾತಿನ ಶೈಲಿ ಕುರಿತು ಜೆಡಿಎಸ್ ನಾಯಕರು ಟೀಕಿಸುತ್ತಿರುವುದನ್ನು ಪ್ರಸ್ತಾಪಿಸಿದ ಅವರು, 'ನನ್ನ ನಾಲಿಗೆಯ ಬಗ್ಗೆ ಮಾತನಾಡಲು ಜೆಡಿಎಸ್‌ನವರಿಗೆ ಯಾವ ನೈತಿಕತೆ ಇದೆ? ಈವರೆಗೆ ಬಿಜೆಪಿ ನಾಯಕರಿಗೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಪ್ರಿಯಾಂಕ್ ಖರ್ಗೆ ಬೇಕಾಗಿದ್ದರು. ಈಗ ಜೆಡಿಎಸ್‌ಗೂ ನಾನು ಅನಿವಾರ್ಯವಾಗಿದ್ದರೆ ಮಾತನಾಡಿಕೊಳ್ಳಲಿ' ಎಂದು ವ್ಯಂಗ್ಯವಾಡಿದರು. ಕುಮಾರಸ್ವಾಮಿ ಅವರು ಈ ಹಿಂದೆ ಆರ್‌ಎಸ್‌ಎಸ್ ಅನ್ನು 'ವಿಷಸರ್ಪ' ಎಂದು ಟೀಕಿಸಿ ಲೇಖನ ಬರೆದಿದ್ದರು. ಆಗ ಅವರ ವಿಚಾರಧಾರೆ ಮೆಚ್ಚಿ ತಾವು ಅಭಿಮಾನಿಯಾಗಿದ್ದೆ. ಆದರೆ, ಅಧಿಕಾರಕ್ಕಾಗಿ ತತ್ವ–ಸಿದ್ಧಾಂತಗಳನ್ನು ಬದಿಗೊತ್ತುವವರ ಬಗ್ಗೆ ಏನು ಹೇಳಬೇಕು? ಜೆಡಿಎಸ್–ಬಿಜೆಪಿಯಿಂದ ತಾನು ಕಲಿಯಬೇಕಾದದ್ದು ಏನೂ ಇಲ್ಲ ಎಂದರು.

ಜ್ಞಾನೇಂದ್ರ ಕುಮಾರ್ ವಿಚಾರ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಅವರ ವಿಚಾರದಲ್ಲಿ ಕುಮಾರಸ್ವಾಮಿ ಮಾಡುತ್ತಿರುವ ಆರೋಪಗಳಿಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, 'ಅವರು ಓಡಿ ಹೋಗಿದ್ದಾರೆಯೇ ಅಥವಾ ನಮ್ಮ ವಶದಲ್ಲಿದ್ದಾರೆಯೇ ಎಂಬುದು ಕುಮಾರಸ್ವಾಮಿಗೆ ಹೇಗೆ ಗೊತ್ತು? ಎಲ್ಲ ವಿಚಾರಗಳನ್ನೂ ಬಹಿರಂಗವಾಗಿ ಚರ್ಚಿಸಲು ಸಾಧ್ಯವಿಲ್ಲ' ಎಂದರು.

ಒಬ್ಬ ಅಧಿಕಾರಿ ಲಿಖಿತವಾಗಿ ರಜೆಗಾಗಿ ಅರ್ಜಿ ಸಲ್ಲಿಸಿದರೆ ಸರ್ಕಾರ ಅದನ್ನು ನಂಬಬೇಕಲ್ಲವೇ? ಜ್ಞಾನೇಂದ್ರ ಕುಮಾರ್ ಎಲ್ಲಿದ್ದಾರೆ ಎಂಬುದು ತಮಗೆ ಗೊತ್ತಿದೆ. ಆದರೆ, ಆ ಮಾಹಿತಿಯನ್ನು ಕುಮಾರಸ್ವಾಮಿ ಅಥವಾ ಬಿಜೆಪಿಯವರಿಗೆ ನೀಡುವ ಅಗತ್ಯವಿಲ್ಲ ಎಂದು ಹೇಳಿದರು. ಜ್ಞಾನೇಂದ್ರ ಕುಮಾರ್ ಮರಳಿ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ. ಬಳಿಕ ಅವರು ನೀಡಿರುವ ಮಾಹಿತಿ ಸತ್ಯವೇ ಅಥವಾ ಸುಳ್ಳೇ ಎಂಬುದನ್ನು ಪರಿಶೀಲಿಸಲಾಗುವುದು ಎಂದರು. 'ಕುಮಾರಸ್ವಾಮಿ ರಾಜ್ಯದ ಪರವಾಗಿ ಧ್ವನಿ ಎತ್ತಿದ್ದಾರೆಯೇ?' ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿರುವುದರಿಂದ ರಾಜ್ಯಕ್ಕೆ ಅವರಿಂದ ಆಗಿರುವ ಲಾಭವೇನು? ರಾಜ್ಯದ ಪರವಾಗಿ ಅವರು ಯಾವಾಗಲಾದರೂ ಕೇಂದ್ರದಲ್ಲಿ ಧ್ವನಿ ಎತ್ತಿದ್ದಾರೆಯೇ ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು. 'ಪ್ರಿಯಾಂಕ್ ಖರ್ಗೆ ಅವರನ್ನು ಟೀಕಿಸಿದರೆ ಬಿಜೆಪಿ ಮತ್ತು ಜೆಡಿಎಸ್‌ನವರಿಗೆ ಕೇಶವಕೃಪಾದಲ್ಲಿ ಅಂಕಗಳು ಸಿಗುತ್ತವೆ. ಅದಕ್ಕಾಗಿ ಪ್ರತಿದಿನ ಬೆಳಗ್ಗೆ ಎದ್ದ ತಕ್ಷಣ ನನ್ನನ್ನು ಟೀಕಿಸುವುದನ್ನೇ ಅವರು ಫ್ಯಾಷನ್ ಮಾಡಿಕೊಂಡಿದ್ದಾರೆ. ನನ್ನಿಂದಾಗಿ ಬಿಜೆಪಿಯ ಬಾಡಿಗೆ ಭಾಷಣಕಾರರಿಗೆ ಹಾಗೂ ಸಾಮಾಜಿಕ ಜಾಲತಾಣದಲ್ಲಿರುವವರಿಗೆ ಸಂಬಳ ಸಿಗುತ್ತಿದೆ' ಎಂದು ವ್ಯಂಗ್ಯವಾಡಿದರು.

ಪ್ರಜ್ವಲ್ ರೇವಣ್ಣ ವಿಚಾರ ಪ್ರಜ್ವಲ್ ರೇವಣ್ಣ ಪ್ರಕರಣದ ಕುರಿತು ಕುಮಾರಸ್ವಾಮಿ ನೀಡಿರುವ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, 'ಹಾಸನದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವಂತೆ ನಾವು ಹೇಳಿದ್ದೆವೇ? ಸಂತ್ರಸ್ತ ಮಹಿಳೆಯರ ಕುರಿತು ಮಾತನಾಡಲು ಕುಮಾರಸ್ವಾಮಿಗೆ ಸಾಧ್ಯವಾಗುತ್ತಿಲ್ಲ' ಎಂದು ಟೀಕಿಸಿದರು.

ಗೃಹ ಸಚಿವನಾಗಿ ಪರಪ್ಪನ ಅಗ್ರಹಾರ ಸೇರಿದಂತೆ ರಾಜ್ಯದ ಎಲ್ಲ ಕಾರಾಗೃಹಗಳನ್ನು ಸ್ವಚ್ಛಗೊಳಿಸುವುದು ತಮ್ಮ ಕರ್ತವ್ಯ. ಆ ಕೆಲಸವನ್ನು ತಾವು ಮಾಡುತ್ತಿದ್ದೇವೆ ಎಂದರು.'ಜೈಲಿನಲ್ಲಿರುವ ಪ್ರಜ್ವಲ್ ರೇವಣ್ಣ ಮೊಬೈಲ್ ಬಳಸಬಹುದೇ? ಅವರಿಂದ ಕುಮಾರಸ್ವಾಮಿಗೆ ಕರೆಗಳು ಬರುತ್ತಿದ್ದವೇ? ಈ ಬಗ್ಗೆ ಮಾಹಿತಿ ಇದ್ದರೂ ವಿಷಯವನ್ನು ಮುಚ್ಚಿಟ್ಟಿದ್ದರೇ?' ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

# ಮಧ್ಯಪ್ರದೇಶದಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೆಂಗಳೂರಿನ ಸೈಬರ್ ಕ್ರೈಂ ಇನ್‌ಸ್ಪೆಕ್ಟರ್ ಸಾವು

**ವಿಜಯ ದುಂಬಿ ಸುದ್ದಿ....**

**ಭೋಪಾಲ್: ಸೈಬರ್ ಕ್ರೈಂ ಪ್ರಕರಣವೊಂದರ ತನಿಖೆಗಾಗಿ ಮಧ್ಯಪ್ರದೇಶಕ್ಕೆ ತೆರಳಿದ್ದ ಬೆಂಗಳೂರು ಆಗ್ನೇಯ ವಿಭಾಗದ ಸಿಇಎನ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ರವಿ ಕೆ.ಬಿ. ಅವರು ಭೀಕರ ಬಸ್ ಅಪಘಾತದಲ್ಲಿ ಮೃತಪಟ್ಟಿದ್ದಾರೆ.**

ಭೋಪಾಲ್‌ನಿಂದ ಇಂದೋರ್‌ಗೆ ತೆರಳುತ್ತಿದ್ದ ವೇಳೆ ಅವರು ಪ್ರಯಾಣಿಸುತ್ತಿದ್ದ ಬಸ್ ನಿಯಂತ್ರಣ ತಪ್ಪಿ ಪ್ರಪಾತಕ್ಕೆ ಉರುಳಿದೆ. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಇನ್‌ಸ್ಪೆಕ್ಟರ್ ರವಿ ಅವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಮುಂಜಾನೆ ಅವರು ಕೊನೆಯುಸಿರೆಳೆದಿದ್ದಾರೆ. ಅಪಘಾತದಲ್ಲಿ ಪಿಎಸ್‌ಐ ಸೇರಿದಂತೆ ಬೆಂಗಳೂರು ಪೊಲೀಸರ ತಂಡದ ಇತರ ಸಿಬ್ಬಂದಿಗೂ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.



ತನಿಖೆಗೆ ತೆರಳಿದ್ದ ತಂಡ ಸೈಬರ್ ಅಪರಾಧಗಳ ಸ್ವರೂಪ ದಿನದಿಂದ ದಿನಕ್ಕೆ ಬದಲಾಗುತ್ತಿರುವ ಹಿನ್ನೆಲೆಯಲ್ಲಿ, ಪ್ರಕರಣಗಳ ತನಿಖೆ ಒಂದು ಠಾಣೆ ಅಥವಾ ರಾಜ್ಯದ ಗಡಿಗೆ ಸೀಮಿತವಾಗದೆ ವಿವಿಧ ರಾಜ್ಯಗಳಿಗೆ ವಿಸ್ತರಿಸುವ ಅಗತ್ಯ ಎದುರಾಗಿದೆ. ಇದೇ ಹಿನ್ನೆಲೆಯಲ್ಲಿ ಬೆಂಗಳೂರು ಪೊಲೀಸರ ತಂಡವೊಂದು ಸೈಬರ್ ಕ್ರೈಂ ಪ್ರಕರಣದ ತನಿಖೆಗಾಗಿ ಮಧ್ಯಪ್ರದೇಶಕ್ಕೆ ತೆರಳಿತ್ತು.

ಆದರೆ, ತನಿಖೆಯ ಹೊಣೆ ಹೊತ್ತು ಕರ್ತವ್ಯದ ನಿಮಿತ್ತ ತೆರಳಿದ್ದ ಪೊಲೀಸ್ ತಂಡದ ಪ್ರಯಾಣವೇ ದುರಂತದಲ್ಲಿ ಅಂತ್ಯಗೊಂಡಿದೆ. ಕರ್ತವ್ಯದ ಸಂದರ್ಭದಲ್ಲೇ ಅಧಿಕಾರಿಯೊಬ್ಬರು ಮೃತಪಟ್ಟಿರುವುದು ಸಹೋದ್ಯೋಗಿಗಳು ಹಾಗೂ ಬೆಂಗಳೂರು ಪೊಲೀಸ್ ಇಲಾಖೆಯಲ್ಲಿ ತೀವ್ರ ದುಃಖಕ್ಕೆ ಕಾರಣವಾಗಿದೆ.

ಹಲವು ಠಾಣೆಗಳಲ್ಲಿ ಸೇವೆ 2007ನೇ ಬ್ಯಾಚ್‌ನ ಪೊಲೀಸ್ ಅಧಿಕಾರಿಯಾಗಿದ್ದ ರವಿ ಕೆ.ಬಿ. ಅವರು ಬೆಂಗಳೂರಿನ ವಿವಿಧ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಅಶೋಕನಗರ, ಇಂದಿರಾನಗರ ಹಾಗೂ ಕೋರಮಂಗಲ ಸೇರಿದಂತೆ ಹಲವು ಠಾಣೆಗಳಲ್ಲಿ ಸೇವೆ ಸಲ್ಲಿಸಿದ್ದ ಅವರು ತನಿಖಾ ಕಾರ್ಯಗಳಲ್ಲಿ ಅನುಭವ ಹೊಂದಿದ್ದರು. ಕೋರಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಸರಗಳ್ಳತನ ಪ್ರಕರಣದ ತನಿಖೆಯಲ್ಲೂ ಅವರು ಪೊಲೀಸ್ ತಂಡದೊಂದಿಗೆ ಕಾರ್ಯನಿರ್ವಹಿಸಿದ್ದರು. ಇತ್ತೀಚೆಗೆ ಅಶೋಕನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಆಗಿಯೂ ಸೇವೆ ಸಲ್ಲಿಸಿದ್ದ ಅವರು ಹಲವು ಮಹತ್ವದ ತನಿಖೆಗಳಲ್ಲಿ ಭಾಗಿಯಾಗಿದ್ದರು. ಕರ್ತವ್ಯದ ನಿಮಿತ್ತ ತೆರಳಿದ್ದ ವೇಳೆ ಸಂಭವಿಸಿದ ಈ ಅನಿರೀಕ್ಷಿತ ದುರ್ಘಟನೆಯು ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ಹಾಗೂ ಸಹೋದ್ಯೋಗಿಗಳಲ್ಲಿ ತೀವ್ರ ಆಘಾತ

VIJYA DUMBI KANNADA DAILY EDITED,PUBLISHED AND OWNED BY,VIJYA PRiNTED AT MANJESHA,U#74,4TH,MAIN,7TH,CROSS,NEARCHOWDESHARI TEMPALE KAVERINAGARA,MAHADEVAPURA,POST BANGALORU KARNATAKAPUBLISHED Hosapalya Byrasandra Modalakote Po , Nelamangala to bengaluru rurala Karnataka 562123 EDITOR VIJYA